# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 4 (11) |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 04.12.2023 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನಗಳು ಎಷ್ಟು ಮತ್ತು ಅವು ಯಾವುವು; ವಿದ್ಯಾರ್ಥಿ ವೇತನಗಳ ಸಂಖ್ಯೆ ಮತ್ತು ಮೊತ್ತವೆಷ್ಟು; (ವರ್ಷವಾರು ಮೊತ್ತದ ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ವಿದ್ಯಾರ್ಥಿವೇತನಗಳ ವಿವರ ಕೆಳಕಂಡಂತಿದೆ:<br>**ಅ) ಕಾಲೇಜು ಶಿಕ್ಷಣ ಇಲಾಖೆ:**<br>1. ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ.<br>2. ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ.<br>3. ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ.<br>4. ಹೆಚ್ ಐವಿ/ಲೆಪ್ರಸಿ ವಿದ್ಯಾರ್ಥಿವೇತನ.<br>5. ರಾಜೀವ್‌ಗಾಂಧಿ ಸಾಲರೂಪದ ವಿದ್ಯಾರ್ಥಿವೇತನದ ಸಬ್ಸಿಡಿ ನೀಡಿಕೆ.<br>6. ಹೆಣ್ಣು ಮಕ್ಕಳ ಶುಲ್ಕ ಮರುಪಾವತಿ.<br>7. ಎಂಬಿಎ/ಎಂಸಿಎ ಕೋರ್ಸ್ ಗೆ ಪ್ರವೇಶ ಪಡೆದ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ.<br>8. ಸೈನಿಕ ಸಿಬ್ಬಂದಿ ಮಕ್ಕಳ ಕಾಲೇಜು ಶುಲ್ಕ ಮರುಪಾವತಿ.<br>ವರ್ಷವಾರು ಮೊತ್ತದ ವಿವರಗಳನ್ನು ಅನುಬಂಧ-1ರಲ್ಲಿರಿಸಿದೆ.<br>**ಆ) ತಾಂತ್ರಿಕ ಶಿಕ್ಷಣ ಇಲಾಖೆ:** ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುವ ಸರ್ಕಾರಿ / ಅನುದಾನಿತ / ಅನುದಾನರಹಿತ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಗಿನ ವಿವಿಧ ಯೋಜನೆಯಡಿಯಲ್ಲಿ ಶುಲ್ಕ ಮರುಪಾವತಿ/ ವಿನಾಯಿತಿ/ ವಿದ್ಯಾರ್ಥಿವೇತನವನ್ನು ಇಲಾಖಾ ವತಿಯಿಂದ ಮಂಜೂರು ಮಾಡಲಾಗುತ್ತಿದೆ.<br>1) ಪರಿಶಿಷ್ಟ ಜಾತಿ (ವಿಶೇಷ ಘಟಕ ಯೋಜನೆ) ಮತ್ತು ಪರಿಶಿಷ್ಟ ಪಂಗಡದ (ಗಿರಿಜನ ಉಪಯೋಜನೆ) ವಿದ್ಯಾರ್ಥಿಗಳಿಗೆ ಶುಲ್ಕಮರುಪಾವತಿ.<br>2) ರಕ್ಷಣಾ ದಳದ ಸಿಬ್ಬಂದಿಯ ಮಕ್ಕಳಿಗೆ/ಆಶ್ರಿತರಿಗೆ ವಿದ್ಯಾರ್ಥಿವೇತನ.<br>3) ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ)<br>4) ಹೆಚ್.ಐ.ವಿ/ಕುಷ್ಠರೋಗ ಪೀಡಿತ ಪೋಷಕರ ಮಕ್ಕಳಿಗೆ/ಪೀಡಿತರಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನ ಹಾಗೂ ಉಚಿತ ಶಿಕ್ಷಣ. |

| | | |
|---|---|---|
| | | 5) ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ.<br><br>ವರ್ಷವಾರು ಮೊತ್ತದ ವಿವರಗಳನ್ನು ಅನುಬಂಧ-2ರಲ್ಲಿರಿಸಿದೆ.<br><br>ಇ) ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ವಿಶ್ವವಿದ್ಯಾಲಯಗಳಲ್ಲಿನ ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಗಳನ್ನು ಪಡೆಯಲು ಎಸ್ ಎಸ್ ಪಿ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |
| ಆ) | ವಿದ್ಯಾರ್ಥಿವೇತನಕ್ಕೆ ಅರ್ಹತೆಯಿರುವ ವಿದ್ಯಾರ್ಥಿಗಳ ಸಂಖ್ಯೆಯೆಷ್ಟು; ಈ ವಿದ್ಯಾರ್ಥಿ ವೇತನಗಳಿಗಾಗಿ ಅರ್ಜಿ ಸಲ್ಲಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ನೀಡಲಾಗುತ್ತಿರುವ ವಿದ್ಯಾರ್ಥಿವೇತನಗಳು ಎಷ್ಟು, ತಿರಸ್ಕರಿಸಿರುವ ಅರ್ಜಿಗಳು ಎಷ್ಟು; (ವರ್ಷವಾರು ಮತ್ತು ವಿದ್ಯಾರ್ಥಿ ವೇತನವಾರು ವಿವರಗಳನ್ನು ನೀಡುವುದು) | ವಿದ್ಯಾರ್ಥಿವೇತನಕ್ಕೆ ಅರ್ಹತೆಯಿರುವ ವಿದ್ಯಾರ್ಥಿಗಳ ಸಂಖ್ಯೆ, ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಸಂಖ್ಯೆ, ನೀಡಲಾಗುತ್ತಿರುವ ವಿದ್ಯಾರ್ಥಿ ವೇತನಗಳು, ಮತ್ತು ತಿರಸ್ಕರಿಸಿರುವ ಅರ್ಜಿಗಳ ವರ್ಷವಾರು ವಿವರಗಳನ್ನು ಅನುಬಂಧಿಸಿದೆ.<br><br>(ಕಾಲೇಜು ಶಿಕ್ಷಣ ಇಲಾಖೆ - ಅನುಬಂಧ-3 ರಲ್ಲಿರಿಸಿದೆ)<br><br>(ತಾಂತ್ರಿಕ ಶಿಕ್ಷಣ ಇಲಾಖೆ - ಅನುಬಂಧ-4 ರಲ್ಲಿರಿಸಿದೆ) |
| ಇ) | ಪ್ರಸ್ತುತ ಈ ವಿದ್ಯಾರ್ಥಿವೇತನಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳು ಮತ್ತು ನಿಯಮಗಳು ಯಾವುವು; (ವಿವರ ನೀಡುವುದು) | ವಿದ್ಯಾರ್ಥಿ ವೇತನಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳು ಮತ್ತು ನಿಯಮಗಳ ವಿವರಗಳನ್ನು ಅನುಬಂಧಿಸಿದೆ.<br><br>(ಕಾಲೇಜು ಶಿಕ್ಷಣ ಇಲಾಖೆ - ಅನುಬಂಧ-5ರಲ್ಲಿರಿಸಿದೆ)<br>(ತಾಂತ್ರಿಕ ಶಿಕ್ಷಣ ಇಲಾಖೆ – ಅನುಬಂಧ-6ರಲ್ಲಿರಿಸಿದೆ) |
| ಈ) | ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಸುವಿಕೆಯಲ್ಲಿನ ಕಠಿಣ ನಿಯಮಗಳು, ಅರ್ಜಿದಾರರ ಸಂಖ್ಯೆ ಕಡಿಮೆ ಮಾಡುವ ಷರತ್ತುಗಳು, ನಿಧಾನ ಗತಿಯ ಸರ್ವರ್‌ಗಳು, ಇತ್ಯಾದಿಗಳ ಕಾರಣದಿಂದಾಗಿ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು | ಇಲ್ಲ<br><br>2022-23 ನೇ ಸಾಲಿನಿಂದ ಇಲಾಖೆಯ ಎಲ್ಲಾ ವಿದ್ಯಾರ್ಥಿವೇತನ ಯೋಜನೆಗಳು ಎಸ್ ಎಸ್ ಪಿ ತಂತ್ರಾಂಶದ ಮೂಲಕ ಅನುಷ್ಠಾನಗೊಂಡಿರುವುದರಿಂದ ವಿದ್ಯಾರ್ಥಿಗಳು ಸಕಾಲದಲ್ಲಿ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಇಲಾಖಾವತಿಯಿಂದ ಅರ್ಜಿಗಳ ಪರಿಶೀಲನೆ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ಡಿ.ಬಿ.ಟಿ ಮುಖಾಂತರ ನೇರವಾಗಿ ವಿದ್ಯಾರ್ಥಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನದ ಮೊತ್ತ ಜಮೆಯಾಗುತ್ತಿದೆ. ರಾಜ್ಯದ ವಿವಿಧ ಇಲಾಖೆಗಳು ನೀಡುತ್ತಿರುವ ವಿದ್ಯಾರ್ಥಿವೇತನದ ಮಂಜೂರಾತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಚಾಲ್ತಿಯಲ್ಲಿದ್ದು ಇಲಾಖೆಯ ಎಲ್ಲಾ ವಿದ್ಯಾರ್ಥಿವೇತನ ಯೋಜನೆಗಳು ಸದರಿ ಪೋರ್ಟಲ್ ನಲ್ಲಿ ಸಂಯೋಜನೆಗೊಂಡಿರುತ್ತದೆ ಹಾಗೂ ಈ ಪೋರ್ಟಲ್ ರಾಜ್ಯದ |

| | | |
|---|---|---|
| | ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಇತರೆ ದತ್ತಾಂಶ ಪೋರ್ಟಲ್‌ಗಳಾದ ಕುಟುಂಬ ಮತ್ತು STATS ಪೋರ್ಟಲ್‌ಗಳ ಜೊತೆ ಸಂಯೋಜನೆಗೊಂಡಿದ್ದು ವಿದ್ಯಾರ್ಥಿಗಳ ಹಿಂದಿನ ಸಾಲಿನ ವಿದ್ಯಾರ್ಹತೆಗಳು, ಪೋಷಕರ ವಾರ್ಷಿಕ ವರಮಾನ, ವಿದ್ಯಾರ್ಥಿಗಳ ಆಧಾರ್ ಇವೆಲ್ಲವುಗಳ ಮಾಹಿತಿಯು ಲಭ್ಯವಿರುವುದರಿಂದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ಸರಳ ರೂಪದಲ್ಲಿರುತ್ತದೆ. ಯಾವುದೇ ರೀತಿಯ ಕಠಿಣ ಸಮಸ್ಯೆಗಳು ಇಲ್ಲದಿರುವುದರಿಂದ ಎಸ್ ಎಸ್ ಪಿ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸುವ ಅರ್ಹತೆ ಇರುವ ಎಲ್ಲ ವಿದ್ಯಾರ್ಥಿಗಳಿಗೆ ಡಿಬಿಟಿ ಮುಖಾಂತರ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿವೇತನವು ಜಮೆಯಾಗುತ್ತಿದೆ. |
| ಉ) | ರಾಜ್ಯದಲ್ಲಿ ವಿವಿಧ ಇಲಾಖೆಗಳ ಮೂಲಕ ನೀಡಲಾಗುತ್ತಿರುವ ಎಲ್ಲಾ ವಿದ್ಯಾರ್ಥಿವೇತನಗಳನ್ನು ಏಕರೂಪ ವ್ಯವಸ್ಥೆಯಡಿ ತರಲು ಸಾಧ್ಯವಿದೆಯೇ; ಶಿಕ್ಷಣ ಇಲಾಖೆಯಲ್ಲಿ ಈಗಾಗಲೇ ಸಂಗ್ರಹಿತವಾಗಿರುವ ವಿದ್ಯಾರ್ಥಿಗಳ ದತ್ತಾಂಶವನ್ನು ನೇರವಾಗಿ ವಿದ್ಯಾರ್ಥಿವೇತನ ತಂತ್ರಾಂಶಕ್ಕೆ ಸಂಪರ್ಕಿಸಿ ಸರಳೀಕರಣಗೊಳಿಸಿ ಮತ್ತು ಸ್ವಯಂಚಾಲಿತವಾಗಿ ಅರ್ಜಿ ದಾಖಲಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ; ಈ ಕುರಿತು ಸರ್ಕಾರ ಏನು ಕ್ರಮವಹಿಸಿದೆ; (ವಿವರ ನೀಡುವುದು) | ಹೌದು<br><br>2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 101ರಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಎಲ್ಲಾ ಶಿಷ್ಯ ವೇತನ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಏಕಶಿಷ್ಯ ವೇತನ ಕಾರ್ಯಕ್ರಮದಡಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುವುದು ಎಂದು ಘೋಷಿಸಲಾಗಿದೆ. ಅದರಂತೆ, 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಅಧೀನ ಇಲಾಖೆಗಳು ಮತ್ತು ಸಾರ್ವಜನಿಕ ವಿಶ್ವವಿದ್ಯಾಲಯಗಳು ಸರ್ಕಾರದ ಅನುದಾನಿತ/ಅರೆ ಸರ್ಕಾರಿ/ಸ್ವಂತ ನಿಧಿ/ದತ್ತಿ ನಿಧಿ/ಎಸ್.ಸಿ.ಎಸ್.ಪಿ/ಟಿ.ಎಸ್.ಪಿ./ಒಬಿಸಿ/ಮೈನಾರಿಟಿ ಅನುದಾನದಿಂದ ಒದಗಿಸುವ ಎಲ್ಲಾ ವಿಧದ ವಿದ್ಯಾರ್ಥಿವೇತನ/ಸಹಾಯಧನ/ನಗದು ಪುರಸ್ಕಾರಗಳನ್ನು ಇ-ಆಡಳಿತ ಇಲಾಖೆಯು ಅಭಿವೃದ್ಧಿ ಪಡಿಸಿ ನಿರ್ವಹಿಸುತ್ತಿರುವ "State Scholarship Portal" ತಂತ್ರಾಂಶದ ಮೂಲಕವೇ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ (ಡಿಬಿಟಿ) ಪಾವತಿಸಲು ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ. |
| ಊ) | ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಪ್ರಥಮ ಹಾಗೂ ದ್ವಿತೀಯ ಪೀಳಿಗೆಯ (ಹಂತದ) ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಪ್ರಥಮ ಹಾಗೂ ದ್ವಿತೀಯ ಪೀಳಿಗೆಯ ಹಂತದ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಎಲ್ಲಾ ವಿಧದ ವಿದ್ಯಾರ್ಥಿವೇತನ/ಸಹಾಯಧನ/ನಗದು ಪುರಸ್ಕಾರಗಳನ್ನು ಇ-ಆಡಳಿತ ಇಲಾಖೆಯು ಅಭಿವೃದ್ಧಿ ಪಡಿಸಿ ನಿರ್ವಹಿಸುತ್ತಿರುವ "State Scholarship Portal" ತಂತ್ರಾಂಶದಲ್ಲಿ ವಿದ್ಯಾರ್ಥಿ ವೇತನಗಳನ್ನು ಪಡೆಯಲು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ: ಇಡಿ 116 ಹೆಚ್‌ಪಿಟಿ 2023)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

**ಕಾಲೇಜು ಶಿಕ್ಷಣ ಇಲಾಖೆ**

ಅನುಬಂಧ

**ವಿವಿಧ ವಿದ್ಯಾರ್ಥಿವೇತನದ ಯೋಜನೆಗಳು, ಅರ್ಹತೆ, ಮತ್ತು 2020-21 ರಿಂದ 2022-23 ನೇ ಸಾಲಿನ ಅನುದಾನ ವೆಚ್ಚದ ಮಾಹಿತಿ**

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ವಿದ್ಯಾರ್ಥಿವೇತನ/ಶುಲ್ಕ ಮರುಪಾವತಿಯ ಮೊತ್ತ (ವಾರ್ಷಿಕ) | ಅರ್ಹತೆ | 2022-23 (ರೂ.ಲಕ್ಷಗಳಲ್ಲಿ) | 2023-24 (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ | ರೂ.2000/- | ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ವಾರ್ಷಿಕ ರೂ. 2000/- ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. | 210.56 | 1.7 |
| 2 | ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ, | ರೂ.5000/- | ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಾರ್ಷಿಕ ರೂ. 5000/- ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. | 67.05 | 1.6 |
| 3 | ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ | ಸಿ.ಇ.ಟಿ ಶುಲ್ಕ ಮರುಪಾವತಿ | ಸಿ.ಇ.ಟಿ ಮೂಲಕ ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪಡೆದ ಬಿಪಿಎಲ್ ಕುಟುಂಬದ ವಿದ್ಯಾರ್ಥಿನಿಯರಿಗೆ ಸಿಇಟಿ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತದೆ. (ಈ ಯೋಜನೆಯನ್ನು 2022-23 ನೇ ಸಾಲಿನಿಂದ ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.) | 2022-23 ನೇ ಸಾಲಿನಿಂದ ಈ ಯೋಜನೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದ್ದು ಹಿಂದಿನ ಸಾಲಿನ ನವೀಕರಣ ಮಂಜೂರಾತಿ ಜಾರಿಯಲಿದೆ | 3.83 |
| 4 | ಹೆಚ್ ಐವಿ/ಲೆಪ್ರಸಿ ವಿದ್ಯಾರ್ಥಿವೇತನ | ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ರೂ.21940/- ಅನುದಾನಿತ/ಅನುದಾನರಹಿತ ಕಾಲೇಜು ವಿದ್ಯಾರ್ಥಿಗಳಿಗೆ ರೂ.22880/- | ಸರ್ಕಾರಿ ಮತ್ತು ಅನುದಾನಿತ/ಅನುದಾನರಹಿತ ಪದವಿ/ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹೆಚ್‌ಐವಿ/ಲೆಪ್ರಸಿ ರೋಗ ಪೀಡಿತ ವಿದ್ಯಾರ್ಥಿಗಳು ಅಥವಾ ರೋಗ ಪೀಡಿತ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುವುದು. | 6.05 | 0.43 |
| 5 | ರಾಜೀವಗಾಂಧಿ ಸಾಲರೂಪದ ವಿದ್ಯಾರ್ಥಿವೇತನದ ಸಬ್ಸಿಡಿ ನೀಡಿಕೆ | ಬಡ್ಡಿ ಸಬ್ಸಿಡಿ ಮಂಜೂರಾತಿ | ಇಲಾಖಾ ವ್ಯಾಪ್ತಿಯ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆಯುವ ಶೈಕ್ಷಣಿಕ ಸಾಲಕ್ಕೆ ಶೈಕ್ಷಣಿಕ ಅವಧಿಗೆ ಬ್ಯಾಂಕುಗಳಿಗೆ ಇಲಾಖೆಯಿಂದ ಬಡ್ಡಿ ಸಬ್ಸಿಡಿಯನ್ನು ನೀಡಲಾಗುತ್ತದೆ. | ಈ ಸಾಲಿನಲ್ಲಿ ವಿದ್ಯಾರ್ಥಿಗಳು ಯಾರು ಬ್ಯಾಂಕುಗಳಲ್ಲಿ ಸಾಲ ಪಡೆದಿರುವುದಿಲ್ಲ. ಆದ ಕಾರಣ ಬಡ್ಡಿ ಸಬ್ಸಿಡಿ ಬಿಡುಗಡೆಯಾಗಿರುವುದಿಲ್ಲ | – |
| 6 | ಹೆಣ್ಣು ಮಕ್ಕಳ ಶುಲ್ಕ ಮರುಪಾವತಿ | ವಿದ್ಯಾರ್ಥಿನಿಯರು ಕಾಲೇಜುಗಳಿಗೆ ಪಾವತಿಸಿದ ಕಾಲೇಜು ಶುಲ್ಕ ಮರುಪಾವತಿ | ಸರ್ಕಾರಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಿಗೆ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡುವ ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ ಕಾಲೇಜು ಶುಲ್ಕ ಮರುಪಾವತಿ ಮಾಡಲಾಗುವುದು | 247.84 | 3.87 |
| 7 | ಎಂಬಿಎ/ಎಂಸಿಎ ಕೋರ್ಸ್ ಗೆ ಪ್ರವೇಶ ಪಡೆದ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | ಶೇಕಡ50% ರಷ್ಟು ಬೋದನಾ ಮತ್ತು ಪರೀಕ್ಷಾ ಶುಲ್ಕ ಮರುಪಾವತಿ | ಪೋಷಕರ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕಿಂತ ಹೆಚ್ಚು ರೂ.10.00 ಲಕ್ಷದೊಳಗಿರುವ ಪರಿಶಿಷ್ಟ ಕೋಟದಡಿ ಸಿ.ಇ.ಟಿ ಮೂಲಕ ಎಂಬಿಎ/ಎಂಸಿಎ ಕೋರ್ಸ್ ಗೆ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಬೋಧನಾ ಮತು ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. | 16.6 | 28.35 |
| 8 | ಸೈನಿಕ ಸಿಬ್ಬಂದಿ ಮಕ್ಕಳ ಕಾಲೇಜು ಶುಲ್ಕ ಮರುಪಾವತಿ | ಕಾಲೇಜು ಶುಲ್ಕ ಮರುಪಾವತಿ | ಪದವಿ ಮತ್ತು ವೈದ್ಯಕೀಯ ಶಿಕ್ಷಣ ಅಭ್ಯಾಸ ಮಾಡುವ ಸೈನಿಕ ಸಿಬ್ಬಂದಿ ಮಕ್ಕಳ ಕಾಲೇಜು ಶುಲ್ಕ ಮರುಪಾವತಿ | ವೈದ್ಯಕೀಯ ಶಿಕ್ಷಣ ಅಭ್ಯಾಸ ಮಾಡುವ ಸೈನಿಕ ಸಿಬ್ಬಂದಿ ಮಕ್ಕಳ ಕಾಲೇಜು ಶುಲ್ಕ ಮರುಪಾವತಿ ಯೋಜನೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ. | – |

ಅನುಬಂಧ-2

<u>ಅನುಬಂಧ</u>

## ಕಳೆದ 03 ವರ್ಷಗಳ ತಾಂತ್ರಿಕ ಶಿಕ್ಷಣ ಇಲಾಖೆಯ ವಿದ್ಯಾರ್ಥಿವೇತನ ವಿಭಾಗದ ಆಯವ್ಯಯ ವಿವರಗಳು

| ಕ್ರ. ಸಂ | ತಾಂತ್ರಿಕ ಶಿಕ್ಷಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ವಿದ್ಯಾರ್ಥಿವೇತನಗಳು | ವಿದ್ಯಾರ್ಥಿವೇತನಕ್ಕೆ ಅರ್ಹತೆಯಿರುವ ವಿದ್ಯಾರ್ಥಿಗಳ ಸಂಖ್ಯೆ | | | ಈ ವಿದ್ಯಾರ್ಥಿವೇತನಗಳಿಗಾಗಿ ಅರ್ಜಿ ಸಲ್ಲಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | | | ನೀಡಲಾಗುತ್ತಿರುವ ವಿದ್ಯಾರ್ಥಿವೇತನಗಳು (ಲಕ್ಷಗಳಲ್ಲಿ) | | | ಷರಾ |
|---|---|---|---|---|---|---|---|---|---|---|---|
| | | 2021-22 | 2022-23 | 2023-24 | 2021-22 | 2022-23 | 2023-24 | 2021-22 | 2022-23 | 2023-24 | |
| 1. | ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | 1636 | 1812 | 966 | 1636 | 1812 | 966 | 799.99 | 899.02 | 529.78 | ತಿರಸ್ಕರಿಸಿರುವ ಅರ್ಜಿಗಳು ಯಾವುದು ಇರುವುದಿಲ್ಲ |
| 2. | ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | 618 | 747 | 422 | 618 | 747 | 422 | 315.57 | 399.99 | 244.27 | |
| 3. | ರಕ್ಷಣಾದಳದ ಸಿಬ್ಬಂದಿಯ ಮಕ್ಕಳಿಗೆ/ಆಶ್ರಿತರಿಗೆ ವಿದ್ಯಾರ್ಥಿವೇತನ. | 313 | 663 | 151 | 313 | 663 | 151 | 173.08 | 393.12 | 93.44 | |
| 4 | ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) | 143 | 125 | 27 | 143 | 125 | 27 | 57.88 | 48.10 | 13.39 | |
| 5 | ಹೆಚ್.ಐ.ವಿ/ಕುಷ್ಠರೋಗ ಪೀಡಿತ ಪೋಷಕರ ಮಕ್ಕಳಿಗೆ/ಪಿಡಿತರಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನ ಮತ್ತು ಉಚಿತ ಶಿಕ್ಷಣ | - | 13 | 4 | - | 13 | 4 | - | 5.56 | 1.82 | |
| 6 | ಶಿಷ್ಯ ವೇತನ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ | 598 | - | 327 | 598 | - | 327 | 2.92 | - | 8.17 | |

"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಅನುಬಂಧ-3

ಅನುಬಂಧ

2022-23 ಮತ್ತು 2023-24 ನೇ ಸಾಲಿಗೆ ಇಲಾಖಾ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿದ/ವಿದ್ಯಾರ್ಥಿವೇತನ ಮಂಜೂರಾದ/ ಅರ್ಜಿ ತಿರಸ್ಕರಿಸಿದ ವಿದ್ಯಾರ್ಥಿಗಳ ಸಂಖ್ಯೆ ಮಾಹಿತಿ ಕೋರಿ

| ಕ್ರ ಸಂ | ವಿದ್ಯಾರ್ಥಿವೇತನ ಯೋಜನೆಯ ಹೆಸರು | ವರ್ಷ | ನೂತನ/ನವೀಕರಣದ ವಿದ್ಯಾರ್ಥಿವೇತನಕ್ಕೆ ಅರ್ಹತೆ ಹೊಂದಿದ ವಿದ್ಯಾರ್ಥಿಗಳ ಸಂಖ್ಯೆ | ನವೀಕರಣ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು | ವಿದ್ಯಾರ್ಥಿವೇತನ ಮಂಜೂರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾತಿಗೆ ಬಾಕಿ ಇರುವ ವಿದ್ಯಾರ್ಥಿಗಳ ಸಂಖ್ಯೆ | ತಿರಸ್ಕೃತ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು | ಷರಾ |
|---|---|---|---|---|---|---|---|---|
| 1 | ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ | 2022-23 | 10887 | 10887 | 10528 | 184 | 175 | ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಆಧಾರ್ ಸೀಡ್ ಆಗದ ಕಾರಣ ಮಂಜೂರು ಆಗಿರುವುದಿಲ್ಲ |
| | | 2023-24 | | | 85 | 99 | _ | 2022-23 ನೇ ಸಾಲಿನ ಮಂಜೂರಾತಿಗೆ ಬಾಕಿ ಇದ್ದ 85 ವಿದ್ಯಾರ್ಥಿನಿಯರಿಗೆ 2023-24 ನೇ ಸಾಲಿನ ಅನುದಾನದಲ್ಲಿ ಮಂಜೂರು ಮಾಡಲಾಗಿದೆ 2023-24 ನೇ ಸಾಲಿಗೆ ವಿದ್ಯಾರ್ಥಿಗಳು ಎಸ್ ಎಸ್ ಪಿ ಪೋರ್ಟಲ್ ನಲಿ ಇನು ಅರ್ಜಿ ಸಲಿಸುತಿದ್ದು ಮಂಜೂರಾತಿ ಕಾರ್ಯ ಇನೂ |
| 2 | ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ | 2022-23 | 1402 | 1341 | 1341 | 39 | 22 | ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಆಧಾರ್ ಸೀಡ್ ಆಗದ ಕಾರಣ ಮಂಜೂರು ಆಗಿರುವುದಿಲ್ಲ |
| | | 2023-24 | | | 32 | 7 | _ | 2022-23 ನೇ ಸಾಲಿನ ಮಂಜೂರಾತಿಗೆ ಬಾಕಿ ಇದ್ದ 32 ವಿದ್ಯಾರ್ಥಿಗಳಿಗೆ 2023-24 ನೇ ಸಾಲಿನ ಅನುದಾನದಲ್ಲಿ ಮಂಜೂರು ಮಾಡಲಾಗಿದೆ. ವಿದ್ಯಾರ್ಥಿಗಳು ಎಸ್ ಎಸ್ ಪಿ ಪೋರ್ಟಲ್ ನಲಿ ಇನು ಅರ್ಜಿ ಸಲಿಸುತಿದ್ದು ಮಂಜೂರಾತಿ ಕಾರ್ಯ ಇನೂ ಪ್ರಗತಿಯಲಿರುತದೆ |
| 3 | ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ | 2022-23 | 46 | 46 | | 37 | 9 | ಈ ಯೋಜನೆ ನೂತನ ಮಂಜೂರಾತಿಯನ್ನು ತಾಂತ್ರಿಕ ಶಿಕ್ಷಣ ಇಲಾಕೆಗೆ ವರ್ಗಾಯಿಸಲಾಗಿರುತ್ತದೆ. 9 ವಿದ್ಯಾರ್ಥಿನಿಯರು ಇತರೆ ಇಲಾಖೆಗಳು ನೀಡುವ ಶುಲ್ಕ ಮರುಪಾವತಿ ಯೋಜನೆಯನು ಪಡೆದಿರುವುದರಿಂದ ಈ ಶುಲ ಮಂಜೂರಾತಿಗೆ |
| | | 2023-24 | | | 7 | 30 | | 30ವಿದ್ಯಾರ್ಥಿನಿಯರಿಗೆ ಶುಲ್ಕ ಹಿಂದಿನ2019-20 ರಿಂದ 2021-22 ನೇ ಸಾಲಿನ ನವೀಕರಣ ಮಂಜೂರಾತಿ ನೀಡಲಾಗಿದ್ದು ಉಳಿದ ವಿದ್ಯಾರ್ಥಿಗಳಿಗೆ ಡಿಬಿಟಿಯಿಂದ ಮಂಜೂರಾತಿ ಬಾಕಿ ಇದೆ |
| 4 | ಹೆಚ್ ಐ ವಿ/ಲೆಪ್ರಸಿ ವಿದ್ಯಾರ್ಥಿವೇತನ | 2022-23 | 56 | 56 | 27 | 10 | 19 | ಕೆಲವು ವಿದ್ಯಾರ್ಥಿಗಳು ಇತರೆ ಇಲಾಖೆಗಳು ನೀಡುವ ವಿದ್ಯಾರ್ಥಿವೇತನವನ್ನು ಪಡೆದಿರುತ್ತಾರೆ , ಮತು ಕೆಲವು ವಿದ್ಯಾರ್ಥಿಗಳು ಸಮರ್ಪಕ ದಾಖಲೆಗಳನು ಸಲಿಸಿರುವುದಿಲ |
| | | 2023-24 | | | 2 | 8 | _ | 2022-23 ನೇ ಸಾಲಿನ ಮಂಜೂರಾತಿಗೆ ಬಾಕಿ ಇದ್ದ 2 ವಿದ್ಯಾರ್ಥಿಗಳಿಗೆ 2023-24 ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದೆ. ಹಾಗೂ 2023-24 ನೇ ಸಾಲಿಗೆ ವಿದ್ಯಾರ್ಥಿಗಳು ಎಸ್ ಎಸ್ ಪಿ ಪೋರ್ಟಲ್ ನಲಿ ಇನು ಅರ್ಜಿ ಸಲಿಸುತಿದ್ದು ಮಂಜೂರಾತಿ ಕಾರ್ಯ |
| 5 | ರಾಜೀವಗಾಂಧಿ ಸಾಲರೂಪದ ವಿದ್ಯಾರ್ಥಿವೇತನದ | 2022-23 | ಈ ಯೋಜನೆಯಡಿ ಯಾವುದೇ ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಸಾಲ ಪಡೆಯದ ಕಾರಣ ಬಡ್ಡಿ ಸಬ್ಸಿಡಿ ಮಂಜೂರು ಆಗಿರುವುದಿಲ್ಲ | | | | | |
| 6 | ಹೆಣ್ಣು ಮಕ್ಕಳ ಶುಲ್ಕ ಮರುಪಾವತಿ | 2022-23 | 7291 | 7291 | 5662 | 489 | 1140 | ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಆಧಾರ್ ಸೀಡ್ ಆಗದ ಕಾರಣ ಮಂಜೂರು ಆಗಿರುವುದಿಲ್ಲ |
| | | 2023-24 | | | 89 | 404 | | 2022-23 ನೇ ಸಾಲಿನ ಮಂಜೂರಾತಿಗೆ ಬಾಕಿ ಇದ್ದ 89 ವಿದ್ಯಾರ್ಥಿನಿಯರಿಗೆ 2023-24 ನೇ ಸಾಲಿನ ಅನುದಾನದಲ್ಲಿ ಮಂಜೂರು ಮಾಡಲಾಗಿದೆ. 2023-24 ನೇ ಸಾಲಿಗೆ ವಿದ್ಯಾರ್ಥಿಗಳು ಎಸ್ ಎಸ್ ಪಿ ಪೋರ್ಟಲ್ ನಲಿ ಇನು ಅರ್ಜಿ ಸಲಿಸುತಿದ್ದು ಮಂಜೂರಾತಿ ಕಾರ್ಯ |
| 7 | ಪರಿಶಿಷ್ಟ ಕೋಟದಡಿ ಎಂ.ಬಿ.ಎ/ಎಂ.ಸಿ.ಕೋರ್ಸ್ ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | 2022-23 | 63 | 63 | 63 | | ಇಲ್ಲ | |
| | | 2023-24 | 103 | 103 | 103 | | _ | 2023-24 ನೇ ಸಾಲಿನ ಮಂಜೂರಾತಿ ಕಾರ್ಯ ಇನ್ನೂ ಪ್ರಗತಿಯಲ್ಲಿರುತ್ತದೆ |
| 8 | ಸೈನಿಕ ಸಿಬ್ಬಂದಿ ಮಕ್ಕಳ ಶುಲ್ಕ ಮರುಪಾವತಿ | 2022-23 | ವೈದ್ಯಕೀಯ ಶಿಕ್ಷಣ ವಿದ್ಯಾಭ್ಯಾಸ ಮಾಡುವಸೈನಿಕ ಸಿಬ್ಬಂದಿ ಮಕ್ಕಳ ಶುಲ್ಕ ಮರುಪಾವತಿ ಯೋಜನೆಯನ್ನು 2022-23 ನೇ ಸಾಲಿನಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ. | | | | | |
| | | 2023-24 | 2023-24 ನೇ ಸಾಲಿಗೆ ಪದವಿಗೆ ಪ್ರವೇಶ ಪಡೆದ ಸೈನಿಕ ಸಿಬ್ಬಂದಿ ಮಕ್ಕಳಿಂದ ಇವರೆಗೆ ಯಾವುದೇ ಅರ್ಜಿಗಳು ಸ್ವೀಕಾರವಾಗಿರುವುದಿಲ್ಲ | | | | | |

ಕಾಲೇಜು ಶಿಕ್ಷಣ ನಿರ್ದೇಶಕರು

ಅನುಬಂಧ-4

## ಅನುಬಂಧ

# ಕಳೆದ 03 ವರ್ಷಗಳ ತಾಂತ್ರಿಕ ಶಿಕ್ಷಣ ಇಲಾಖೆಯ ವಿದ್ಯಾರ್ಥಿವೇತನ ವಿಭಾಗದ ಆಯವ್ಯಯ ವಿವರಗಳು

| ಕ್ರ. ಸಂ | ತಾಂತ್ರಿಕ ಶಿಕ್ಷಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ವಿದ್ಯಾರ್ಥಿವೇತನಗಳು | ವಿದ್ಯಾರ್ಥಿವೇತನಕ್ಕೆ ಅರ್ಹತೆಯಿರುವ ವಿದ್ಯಾರ್ಥಿಗಳ ಸಂಖ್ಯೆ | | | ಈ ವಿದ್ಯಾರ್ಥಿವೇತನಗಳಿಗಾಗಿ ಅರ್ಜಿ ಸಲ್ಲಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | | | ನೀಡಲಾಗುತ್ತಿರುವ ವಿದ್ಯಾರ್ಥಿವೇತನಗಳು (ಲಕ್ಷಗಳಲ್ಲಿ) | | | ಷರಾ |
|---|---|---|---|---|---|---|---|---|---|---|---|
| | | 2021-22 | 2022-23 | 2023-24 | 2021-22 | 2022-23 | 2023-24 | 2021-22 | 2022-23 | 2023-24 | |
| 1. | ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | 1636 | 1812 | 966 | 1636 | 1812 | 966 | 799.99 | 899.02 | 529.78 | ತಿರಸ್ಕರಿಸಿರುವ ಅರ್ಜಿಗಳು ಯಾವುದು ಇರುವುದಿಲ್ಲ |
| 2. | ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | 618 | 747 | 422 | 618 | 747 | 422 | 315.57 | 399.99 | 244.27 | |
| 3. | ರಕ್ಷಣಾದಳದ ಸಿಬ್ಬಂದಿಯ ಮಕ್ಕಳಿಗೆ/ಆಶ್ರಿತರಿಗೆ ವಿದ್ಯಾರ್ಥಿವೇತನ. | 313 | 663 | 151 | 313 | 663 | 151 | 173.08 | 393.12 | 93.44 | |
| 4 | ಶುಲ್ಕ ಉಚಿತ (ಪ್ರತಿಭಾ ಪುರಸ್ಕಾರ) | 143 | 125 | 27 | 143 | 125 | 27 | 57.88 | 48.10 | 13.39 | |
| 5 | ಹೆಚ್.ಐ.ವಿ/ಕುಷ್ಠರೋಗ ಪೀಡಿತ ಪೋಷಕರ ಮಕ್ಕಳಿಗೆ/ಪಿಡಿತರಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನ ಮತ್ತು ಉಚಿತ ಶಿಕ್ಷಣ | - | 13 | 4 | - | 13 | 4 | - | 5.56 | 1.82 | |
| 6 | ಶಿಷ್ಯ ವೇತನ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ | 598 | - | 327 | 598 | - | 327 | 2.92 | - | 8.17 | |

**"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

ಅನುಬಂಧ-5

| ಅನುಬಂಧ | | | |
|---|---|---|---|
| ವಿವಿಧ ವಿದ್ಯಾರ್ಥಿವೇತನದ ಯೋಜನೆಗಳ ಮಾಹಿತಿ | | | |
| ಕ್ರಮ ಸಂಖ್ಯೆ | ಯೋಜನೆಯ ಹೆಸರು | ವಿದ್ಯಾರ್ಥಿವೇತನ/ಶುಲ್ಕ ಮರುಪಾವತಿಯ ಮೊತ್ತ (ವಾರ್ಷಿಕ) | ಅರ್ಹತೆ |
| 1 | ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ | ರೂ.2000/- | ದ್ವಿತೀಯ ಪಿಯುಸಿಯಲ್ಲಿ ಶೇಕಡ 70% ಅಂಕ ಪಡೆದು ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. |
| 2 | ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ | ರೂ.5000/- | ದ್ವಿತೀಯ ಪಿಯುಸಿಯಲ್ಲಿ ಶೇಕಡ 70% ಅಂಕ ಪಡೆದು ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಾರ್ಷಿಕ ರೂ. 5000/- ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. |
| 3 | ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ | ಸಿ.ಇ.ಟಿ ಶುಲ್ಕ ಮರುಪಾವತಿ | ಸಿ.ಇ.ಟಿ ಮೂಲಕ ವಿವಿಧ ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಬಿಪಿಎಲ್ ಕುಟುಂಬದಿಂದ ಬಂದಂತಹ, ಪ್ರತಿ ಜಿಲ್ಲೆಯಿಂದ 10 ಮಂದಿ ವಿದ್ಯಾರ್ಥಿನಿಯರಿಗೆ ಸಿಇಟಿ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತದೆ. (ಈ ಯೋಜನೆಯನ್ನು 2022-23 ನೇ ಸಾಲಿನಿಂದ ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದ್ದು ನವೀಕರಣ ಮಂಜೂರಾತಿಯನ್ನು ಮಾತ್ರ2023-24 ನೇ ಸಾಲಿಗೆ ಈ ಇಲಾಖೆಯಿಂದ ನೀಡಲಾಗುತ್ತಿದೆ.) |
| 4 | ಹೆಚ್ ಐವಿ/ಲೆಪ್ರಸಿ ವಿದ್ಯಾರ್ಥಿವೇತನ | ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ರೂ.21940/- ಅನುದಾನಿತ/ಅನುದಾನರಹಿತ ಕಾಲೇಜು ವಿದ್ಯಾರ್ಥಿಗಳಿಗೆ ರೂ.22880/- | ಸರ್ಕಾರಿ ಮತ್ತು ಅನುದಾನಿತ/ಅನುದಾನರಹಿತ ಪದವಿ/ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹೆಚ್ಐವಿ/ಲೆಪ್ರಸಿ ರೋಗ ಪೀಡಿತ ವಿದ್ಯಾರ್ಥಿಗಳು ಅಥವಾ ರೋಗ ಪೀಡಿತ ಪೋಷಕರ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುವುದು. |
| 5 | ರಾಜೀವಗಾಂಧಿ ಸಾಲರೂಪದ ವಿದ್ಯಾರ್ಥಿವೇತನದ ಸಬ್ಸಿಡಿ ನೀಡಿಕೆ | ಬಡ್ಡಿ ಸಬ್ಸಿಡಿ ಮಂಜೂರಾತಿ | ಇಲಾಖಾ ವ್ಯಾಪ್ತಿಯ ಸರ್ಕಾರಿ/ಅನುದಾನಿತ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ಅರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆಯುವ ಶೈಕ್ಷಣಿಕ ಸಾಲಕ್ಕೆ ಶೈಕ್ಷಣಿಕ ಅವಧಿಗೆ ಬ್ಯಾಂಕುಗಳಿಗೆ ಇಲಾಖೆಯಿಂದ ಬಡ್ಡಿ ಸಬ್ಸಿಡಿಯನ್ನು ನೀಡಲಾಗುತ್ತದೆ. |
| 6 | ಹೆಣ್ಣು ಮಕ್ಕಳ ಶುಲ್ಕ ಮರುಪಾವತಿ | ವಿದ್ಯಾರ್ಥಿನಿಯರು ಕಾಲೇಜುಗಳಿಗೆ ಪಾವತಿಸಿದ ಕಾಲೇಜು ಶುಲ್ಕ ಮರುಪಾವತಿ | ಸರ್ಕಾರಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಿಗೆ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡುವ ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ ಕಾಲೇಜು ಶುಲ್ಕ ಮರುಪಾವತಿ ಮಾಡಲಾಗುವುದು |
| 7 | ಎಂಬಿಎ/ಎಂಸಿಎ ಕೋರ್ಸ್ ಗೆ ಪ್ರವೇಶ ಪಡೆದ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ | ಶೇಕಡ50% ರಷ್ಟು ಬೋದನಾ ಮತ್ತು ಪರೀಕ್ಷಾ ಶುಲ್ಕ ಮರುಪಾವತಿ | ಪೋಷಕರ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕಿಂತ ಹೆಚ್ಚು ರೂ.10.00 ಲಕ್ಷದೊಳಗಿರುವ ಪರಿಶಿಷ್ಟ ಕೋಟದಡಿ ಸಿ.ಇ.ಟಿ ಮೂಲಕ ಎಂಬಿಎ/ಎಂಸಿಎ ಕೋರ್ಸ್ ಗೆ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಬೋಧನಾ ಮತು ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. |
| 8 | ಸೈನಿಕ ಸಿಬ್ಬಂದಿ ಮಕ್ಕಳ ಕಾಲೇಜು ಶುಲ್ಕ ಮರುಪಾವತಿ | ಕಾಲೇಜು ಶುಲ್ಕ ಮರುಪಾವತಿ | 2022-23 ನೇ ಸಾಲಿನಿಂದ ವೈದ್ಯಕೀಯ ಶಿಕ್ಷಣ ಅಭ್ಯಾಸ ಮಾಡುವ ಸೈನಿಕ ಸಿಬ್ಬಂದಿ ಮಕ್ಕಳ ಶುಲ್ಕ ಮರುಪಾವತಿ ಯೋಜನೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದ್ದು, ಪದವಿ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವ ಸೈನಿಕ ಸಿಬ್ಬಂದಿ ಮಕ್ಕಳಿಗೆ ಕಾಲೇಜು ಶುಲ್ಕ ಮರುಪಾವತಿ ಮಾಡಲಾಗುವುದು. |

ಅನುಬಂಧ - 6

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ಪ್ರತಿಭಾ ಪುರಸ್ಕಾರ, ಶಿಷ್ಯ ವೇತನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರಿ ಆದೇಶ ಸಂಖ್ಯೆ: ಇಡಿ 116 ಯೋಯೋಕಾ 2006, ದಿ:28.10.2006.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 116 ಯೋಯೋಕಾ 2006, ದಿನಾಂಕ: 27/6/2006.
3. ಸರ್ಕಾರಿ ಆದೇಶ ಸಂಖ್ಯೆ: ಸಕಇ 178 ಪಕವಿ 2015, ದಿ: 31-12-2015. ಮತ್ತು ದಿ: 30-06-2016.
4. ಸರ್ಕಾರಿ ಆದೇಶ ಸಂಖ್ಯೆ: ಇಡಿ 93 ಎಸ್‌ಸಿಎಲ್ 62, ದಿ: 06-09-1963. ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ 43 ಸಿಡಿಪಿ 78, ದಿ: 21-03-1980.
5. ಸರ್ಕಾರಿ ಆದೇಶ ಸಂಖ್ಯೆ: ಇಡಿ 132 ಮಾಹಿತಿ 2013, ದಿ: 31-08-2013.
6. ಸರ್ಕಾರಿ ಆದೇಶ ಸಂಖ್ಯೆ: ಇಡಿ 218 ಟಿಪಿಇ 1999, ದಿ: 27-01-2001.
7. ತಾಂತ್ರಿಕ ಶಿಕ್ಷಣ ಇಲಾಖೆಯ ಏಕ ಕಡತ ಪ್ರಸ್ತಾವನೆ ಸಂಖ್ಯೆ: DTE-ADMI0SCH1/11/2022.

## ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, 2006-07ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಮತ್ತು ಪ್ರತಿಭಾವಂತರಿಗೆ ಶುಲ್ಕ ಉಚಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಪತ್ರದಲ್ಲಿ 2006-07ನೇ ಸಾಲಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳ ವೃತ್ತಿ ಶಿಕ್ಷಣ ವ್ಯಾಸಂಗಕ್ಕೆ ನೆರವು ನೀಡುವ ಬಗ್ಗೆ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಈ ಕೆಳಕಂಡ ಎರಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. **ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ:-**ಈ ಕಾರ್ಯಕ್ರಮದಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಪದವಿ ಪೂರ್ವ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಹತ್ತು ಹೆಣ್ಣು ಮಕ್ಕಳಿಗೆ ವೃತ್ತಿಶಿಕ್ಷಣ ಪಡೆಯಲು ಹಣಕಾಸು ನೆರವನ್ನು ಸರ್ಕಾರ ನೀಡುತ್ತದೆ.
2. **ಪ್ರತಿಭಾವಂತರಿಗೆ ಶುಲ್ಕ ಉಚಿತ:-**ಈ ಕಾರ್ಯಕ್ರಮದಡಿಯಲ್ಲಿ ಬಡಕುಟುಂಬಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪದವಿ ಪೂರ್ವ ಕೋರ್ಸಿನಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ ದಂತ ವಿಜ್ಞಾನ, ಕೃಷಿ ಮತ್ತು ಪಶು ವೈದ್ಯ ವಿಜ್ಞಾನದಂತಹ ವೃತ್ತಿಪರ ಶಿಕ್ಷಣ ಶುಲ್ಕಗಳನ್ನು ಸರ್ಕಾರ ನೀಡುತ್ತದೆ.

ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಯೋಜನೆಯಡಿ ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಇಂಜಿನಿಯರಿಂಗ್ ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಮಂಜೂರಾತಿ ನೀಡಲು ಹಾಗೂ 2023-24ನೇ ಸಾಲಿನಿಂದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿತರಿಸುವ ಈ ಪುರಸ್ಕಾರ ಯೋಜನೆಯನ್ನು ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಹಾಗೂ ಉಳಿದಂತೆ ವೈದ್ಯಕೀಯ,

ಫಾರ್ಮಸಿ, ಬಿ.ಎಸ್ಸಿ(ಕೃಷಿ) ಮತ್ತು ಇತರೆ ಕೋರ್ಸ್‌ಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿನಿಯರಿಗೆ ಸಂಬಂಧಪಟ್ಟ ಇಲಾಖೆಗಳ ವ್ಯಾಪ್ತಿಗೆ ವರ್ಗಾಯಿಸಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ: 31.12.2015ರ ಆದೇಶದಲ್ಲಿ "ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ತಾಂತ್ರಿಕ/ವೈದ್ಯಕೀಯ/ದಂತ ವೈದ್ಯಕೀಯ, ಇತ್ಯಾದಿ ಕೋರ್ಸ್‌ಗಳಿಗೆ CET, COMED-K, Deemed Universities ಮೂಲಕ ಆಯ್ಕೆಯಾಗಿ ದಾಖಲಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.50ಲಕ್ಷ ಮಿತಿಯೊಳಗಿನ, ಶೇ.100ರಷ್ಟು ಹಾಗೂ ರೂ.2.50 ಲಕ್ಷಗಳಿಂದ ರೂ.10.00ಲಕ್ಷ ಮಿತಿಯೊಳಗಿನ, ಶೇ:50ರಷ್ಟು ಶುಲ್ಕವನ್ನು ಮರುಪಾವತಿಸಲು ಆದೇಶಿಸಿದೆ ಹಾಗೂ ದಿನಾಂಕ:30.06.2016ರ ಸರ್ಕಾರಿ ಆದೇಶದಲ್ಲಿ ವಾರ್ಷಿಕ ವರಮಾನ ರೂ. 2.50ಲಕ್ಷಗಳಿಗಿಂತ ಹೆಚ್ಚು ಮತ್ತು ರೂ. 10.00ಲಕ್ಷ ಒಳಗಿರುವ ಸಿ.ಇ.ಟಿ., ಮೂಲಕ ತಾಂತ್ರಿಕ ಮತ್ತು ವೈದ್ಯಕೀಯ ಕೋರ್ಸ್‌ಗಳಿಗೆ ಆಯ್ಕೆಯಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಶೇ.100 ರಷ್ಟು ಸರ್ಕಾರ ನಿಗಧಿಪಡಿಸಿದ ಶುಲ್ಕವನ್ನು ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಮಂಜೂರು ಮಾಡಿ ಪಾವತಿಸಲು/ಮರುಪಾವತಿಸಲು ಆದೇಶಿಸಿದೆ.

ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಯೋಜನೆಯ ಲಾಭವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಿಗಿಂತ ಮೇಲ್ಪಟ್ಟು ಮತ್ತು ರೂ.10.00 ಲಕ್ಷಗಳ ಮಿತಿಯೊಳಗಿರತಕ್ಕದ್ದು. ಕರ್ನಾಟಕ ಪರೀಕ್ಷ ಪ್ರಾಧಿಕಾರ (ಕೆ.ಇ.ಎ) ಮುಖಾಂತರ ಪ್ರವೇಶ ಪಡೆದಂತಹ ಬಿ.ಇ/ಬಿ.ಟೆಕ್/ಬಿ.ಆರ್ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ 100% ರಷ್ಟು ಮತ್ತು ಪಿ.ಜಿ. ಸಿ.ಇ.ಟಿ/ಕಾಮೆಡ್-ಕೆ/ಕೆ.ಆರ್.ಎಲ್.ಎಂ.ಪಿ.ಸಿ.ಎ ಮುಖಾಂತರ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ50% ರಷ್ಟು, ಹಾಗೂ ಸರ್ಕಾರಿ ಮತ್ತು ಅನುದಾನಿತ/ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆದಂತಹ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ 100% ರಷ್ಟು ಈ ಯೋಜನೆಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಆದಾಯ ಪ್ರಮಾಣ ಪತ್ರದ ಜೊತೆಗೆ, ಪೋಷಕರ ವೇತನ ಪ್ರಮಾಣ/ಆದಾಯ ತೆರಿಗೆ ಪಾವತಿ ರಿಟರ್ನ್‌ಸನ್ನು ಸಲ್ಲಿಸುವುದು ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಈ ಆದೇಶವನ್ನು ಪರಿಷ್ಕರಿಸಿ 2022-23ನೇ ಸಾಲಿನಿಂದ ಪ್ರವೇಶ ಪಡೆದು ಎಸ್.ಎಸ್.ಪಿ ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳಿಗೆ ಆರ್ಥಿಕ ವರ್ಷಕ್ಕೆ ಹಂಚಿಕೆ/ ಬಿಡುಗಡೆಯಾಗುವ ಅನುದಾನದಲ್ಲಿ, ಕ್ರಮವಾಗಿ ಸರ್ಕಾರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಂತರ ಅನುದಾನಿತ ಸಂಸ್ಥೆಯ ವಿದ್ಯಾರ್ಥಿಗಳಿಗೆ ಹಾಗೂ ಅನುದಾನ ರಹಿತ ಖಾಸಗಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆ ಆಧಾರದ ಮೇರೆಗೆ ಶುಲ್ಕ ಮಂಜೂರಾತಿ/ಮರುಪಾವತಿ ಮಾಡುವ ಬಗ್ಗೆ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ದಿನಾಂಕ: ದಿ:06-09-1963 ಮತ್ತು ದಿ:21-03-1980 ಆದೇಶದಂತೆ ರಕ್ಷಣಾದಳದಲ್ಲಿ (ಭೂ, ವಾಯು ಮತ್ತು ನೌಕದಳ) ಹಾಲಿ ಸೇವೆ ಸಲ್ಲಿಸುತ್ತಿರುವ ಯೋಧರು/ ಸಿಬ್ಬಂದಿಯವರ (Non Commissioned Ranks or Junior Warrant Officer & Below Ranks Holder) ಮಕ್ಕಳಿಗೆ/ ಆಶ್ರಿತರಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಸಿ.ಇ.ಟಿ) ಮುಖಾಂತರ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ. 100% ರಷ್ಟು ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಸರ್ಕಾರಿ ಮತ್ತು ಅನುದಾನಿತ/ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆದಂತಹ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ. 100% ರಷ್ಟು ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರಸ್ತುತ ಈ ವಿದ್ಯಾರ್ಥಿ ವೇತನವನ್ನು 2022-23ನೇ ಸಾಲಿನಿಂದ ಪ್ರವೇಶ ಪಡೆದು ಎಸ್.ಎಸ್.ಪಿ ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳಿಗೆ ಆರ್ಥಿಕ ವರ್ಷಕ್ಕೆ ಹಂಚಿಕೆ/ ಬಿಡುಗಡೆಯಾಗುವ ಅನುದಾನದ ಮಿತಿಯಲ್ಲಿ ಕ್ರಮವಾಗಿ ಸರ್ಕಾರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಂತರ ಅನುದಾನಿತ ಸಂಸ್ಥೆಯ ವಿದ್ಯಾರ್ಥಿಗಳಿಗೆ ಹಾಗೂ ಅನುದಾನ ರಹಿತ ಖಾಸಗಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆ ಮೇರೆಗೆ ವಿದ್ಯಾರ್ಥಿವೇತನ ವಿತರಣೆ ಮಾಡುವ ಬಗ್ಗೆ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (5)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜು / ಸಂಸ್ಥೆಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಕೋರ್ಸ್, ವೃತ್ತಿ ಶಿಕ್ಷಣ ಕೋರ್ಸ್ ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಹೆಚ್‌ಐವಿ/ ಕುಷ್ಠರೋಗಗಳಿಂದ ಪೀಡಿತರಾದ ಪಾಲಕರ ಅರ್ಹ ಮಕ್ಕಳಿಗೆ/ಪೀಡಿತ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಹಾಗೂ ಉಚಿತ ಶಿಕ್ಷಣವನ್ನು ನೀಡುವ ಕಾರ್ಯಕ್ರಮವನ್ನು ಅಗತ್ಯ ಷರತ್ತುಗಳ ಪಾಲನೆಯೊಂದಿಗೆ ಅನುಷ್ಠಾನಗೊಳಿಸಲಾಗಿದೆ. ಹೆಚ್.ಐ.ವಿ/ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾಗಿದ್ದು ಬದುಕಿರುವ/ಮೃತರಾಗಿರುವ ತಂದೆ ತಾಯಿಯರಿಗೆ ಜನಿಸಿದ ಮಕ್ಕಳಾಗಿರಬೇಕು. ಪ್ರಸ್ತುತ್ತ ರೋಗಗ್ರಸ್ತ ಅಥವಾ ರೋಗಮುಕ್ತವಾಗಿರುವ ಪರಿಸ್ಥಿತಿಯನ್ನು ಪರಿಗಣಿಸದೇ ಹೆಚ್.ಐ.ವಿ/ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಶಿಷ್ಯವೇತನ ಮತ್ತು ಉಚಿತ ಶಿಕ್ಷಣ ನೀಡಲಾಗುವುದು. ಸರ್ಕಾರಿ/ಅನುದಾನಿತ/ಸರ್ಕಾರಿ ಕೋಟಾ ಅಡಿಯಲ್ಲಿರುವ ಸ್ವಾಯುತ್ತತೆ ಹೊಂದಿರುವ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಮಾತ್ರ ಸರ್ಕಾರ ನಿಗಧಿಪಡಿಸಿದ ಭೋಧನಾ ಶುಲ್ಕ, ಪ್ರತಿ ತಿಂಗಳು ರೂ.1500.00 ರಂತೆ 12 ತಿಂಗಳಿಗೆ ಜೀವನೋಪಾಯದ ಭತ್ಯೆ, ಮತ್ತು ಪ್ರತಿ ಅರ್ಹ ವಿದ್ಯಾರ್ಥಿಗೆ ರೂ.3000.00ರಂತೆ ಪ್ರತಿ ವರ್ಷ ಶುಲ್ಕಪಾವತಿ/ಬಟ್ಟೆ/ವಸ್ತ್ರ /ಪುಸ್ತಕ ಮತ್ತು ಕಲಿಕೋಪಕರಣಗಳನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಯು ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಸಂಸ್ಥೆಯ ಪತ್ರದೊಂದಿಗೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಲ್ಲಿಸಿದ ನಂತರ ಅರ್ಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮತ್ತು ಜೀವನೋಪಾಯ ಭತ್ಯೆ ನೀಡಲಾಗುತ್ತಿದೆ. ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರಸ್ತುತ ಈ ಯೋಜನೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯು ಈ ಯೋಜನೆಯಡಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ (ಎಸ್.ಎಸ್.ಪಿ) ಅಳವಡಿಸಿದ ನಂತರ ಅನುಮೋದನೆ ನೀಡುವ ಬಗ್ಗೆ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (6)ರಲ್ಲಿ ಓದಲಾದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 06 ಕಿರಿಯ ತಾಂತ್ರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8, 9 ಹಾಗೂ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.50/- ಶಿಷ್ಯ ವೇತನವನ್ನು ನೀಡಲಾಗುತ್ತಿದೆ.

ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಶಿಷ್ಯ ವೇತನ ರೂ.50/-ನ್ನು ರೂ.250/-ಕ್ಕೆ ಪರಿಷ್ಕರಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (7)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಕೋರಿದಂತೆ ಹಾಗೂ ಮೇಲೆ ಕ್ರಮಾಂಕ (1) ರಿಂದ (6)ರ ವರೆಗಿನ ಆದೇಶ/ಪತ್ರ/ಮಾರ್ಗಸೂಚಿಗಳನ್ನು ಹಿಂಪಡೆದು ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಪ್ರತಿಭಾ ಪುರಸ್ಕಾರ, ಶುಲ್ಕ ಉಚಿತ, ಶುಲ್ಕ ಮಂಜೂರಾತಿ/ಮರುಪಾವತಿ, ವಿದ್ಯಾರ್ಥಿ ವೇತನ, ಶಿಷ್ಯ ವೇತನ/ಶಿಷ್ಯ ವೇತನ ಪರಿಷ್ಕರಣೆ, ಉಚಿತ ಶಿಕ್ಷಣ, ಬೋಧನಾ ಶುಲ್ಕ,

ಜೀವನೋಪಾಯ ಭತ್ಯೆ ಕಾರ್ಯಕ್ರಮಗಳ ಕುರಿತಾದ ಪರಿಷ್ಕೃತ ಆದೇಶ ಹೊರಡಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಹೆಚ್.ಪಿ.ಟಿ. 2022, ಬೆಂಗಳೂರು, ದಿನಾಂಕ: 28ನೇ ಫೆಬ್ರುವರಿ, 2023.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ, ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಪ್ರತಿಭಾ ಪುರಸ್ಕಾರ, ಶುಲ್ಕ ಉಚಿತ, ಶುಲ್ಕ ಮಂಜೂರಾತಿ/ಮರುಪಾವತಿ, ವಿದ್ಯಾರ್ಥಿ ವೇತನ, ಶಿಷ್ಯ ವೇತನ/ಶಿಷ್ಯ ವೇತನ ಪರಿಷ್ಕರಣೆ, ಉಚಿತ ಶಿಕ್ಷಣ, ಬೋಧನಾ ಶುಲ್ಕ, ಜೀವನೋಪಾಯ ಭತ್ಯೆ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ವಿಧಿಸಿದ ಷರತ್ತುಗಳು ಮತ್ತು ನಿಬಂಧನೆಗಳ ಆಧಾರದಲ್ಲಿ ಅನುಷ್ಠಾನಗೊಳಿಸಲು ಆದೇಶಿಸಿದೆ.

1. <u>ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಮತ್ತು ಪ್ರತಿಭಾ ಪುರಸ್ಕಾರ (ಶುಲ್ಕ ಉಚಿತ):-</u>
   ತಾಂತ್ರಿಕ ಶಿಕ್ಷಣ ಇಲಾಖೆಯ ಕೆ.ಇ.ಎ. ಮುಖಾಂತರ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಬೋಧನಾ ಶುಲ್ಕವನ್ನು ಶುಲ್ಕ ಉಚಿತ ಯೋಜನೆಯಡಿ ನೀಡಲಾಗುವುದು.

<u>ಷರತ್ತುಗಳು ಮತ್ತು ನಿಬಂಧನೆಗಳು:-</u>

a. ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ (ಪಿ.ಯು.ಸಿ) ಕೋರ್ಸಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಈ ಎರಡು ಯೋಜನೆಗಳಡಿಯಲ್ಲಿ ಕೆ.ಇ.ಎ. ಮೂಲಕ ಆಯ್ಕೆಯಾದ ಬಿ.ಇ., ಬಿ.ಟೆಕ್., ಬಿ.ಆರ್ಕ್., ಕೋರ್ಸ್‌ಗಳ 10 ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ (ಶೇ.80 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು) ಶೇಕಡ 100ರಷ್ಟು ಬೋಧನಾ ಶುಲ್ಕ ನೀಡುವುದು.
b. ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ (ಬಿ.ಪಿ.ಎಲ್ ಕಾರ್ಡ್ ಹೊಂದಿರುವ) ಕುಟುಂಬದ ವಿದ್ಯಾರ್ಥಿಗಳಾಗಿರಬೇಕು.
c. ಉನ್ನತ ಶಿಕ್ಷಣ ಇಲಾಖೆ ಹೊರತುಪಡಿಸಿದ (ಇಂಜಿನಿಯರಿಂಗ್) ವೈದ್ಯಕೀಯ ಫಾರ್ಮಾಸಿ, ಬಿ.ಎಸ್ಸಿ (ಕೃಷಿ) ಮತ್ತು ಇತರೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿನಿಯರ ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಮತ್ತು ಪ್ರತಿಭಾವಂತರಿಗೆ ಶುಲ್ಕ ಉಚಿತ ಮಂಜೂರಾತಿಯನ್ನು ಸಂಬಂಧಪಟ್ಟ ಇಲಾಖೆಗಳು ನಿರ್ವಹಿಸಲು ಈ ಯೋಜನೆಯನ್ನು 2023-24ನೇ ಸಾಲಿನಿಂದ ವರ್ಗಾಯಿಸಲಾಗಿದೆ.
d. ಈ ಸೌಲಭ್ಯವು ಕರ್ನಾಟಕ ರಾಜ್ಯದಲ್ಲಿರುವ ಸಂಸ್ಥೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ಉಚಿತ ನೀಡುವುದು.
e. 2022-23ನೇ ಸಾಲಿನಿಂದ ಈ ಯೋಜನೆಯನ್ನು ಎಸ್.ಎಸ್.ಪಿ. ಪೋರ್ಟಲ್ ಮೂಲಕ ಅನುಷ್ಠಾನಗೊಳಿಸುವುದು.
f. ಈ ಯೋಜನೆಗೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಜಾತಿ/ವರ್ಗ ಮತ್ತು ಆದಾಯ ಮಿತಿ ನಿಗಧಿಪಡಿಸತಕ್ಕದ್ದಲ್ಲ.
g. ಈ ಯೋಜನೆಯಡಿ ಅರ್ಹರಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (ಎಸ್.ಎಸ್.ಪಿ) ಇಲಾಖೆಯು ವಿದ್ಯಾರ್ಥಿಗಳ SATS ID ಆಧಾರದ ಮೇಲೆ, ಈ ಯೋಜನೆಯ ಅರ್ಹತೆ ಮಾನದಂಡಗಳನ್ನು

ಪಾಲಿಸಿ, ವಿದ್ಯಾರ್ಥಿಗಳ ಅರ್ಜಿ ಮತ್ತು ದಾಖಲಾತಿಗಳನ್ನು ಎಸ್.ಎಸ್.ಪಿ ತಂತ್ರಾಂಶದ ಮುಖಾಂತರ ತಾಂತ್ರಿಕ ಶಿಕ್ಷಣ ಇಲಾಖೆಗೆ ಅನುಮೋದನೆಗೆ ವರ್ಗಾಯಿಸುವುದು.

h. ನವೀಕರಣದ ವಿದ್ಯಾರ್ಥಿಗಳು ಈ ಯೋಜನೆಯ ಮಂಜೂರಾತಿ ಪಡೆಯಲು ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಸಾಲಿಗೆ ಅರ್ಹತೆ ಹೊಂದಿರತಕ್ಕದ್ದು.

i. ಈ ಯೋಜನೆಯ ಫಲಾನುಭವಿಗಳು ರಾಜ್ಯ ಮತ್ತು ಕೇಂದ್ರದ ಬೇರೆ ಯಾವುದೇ ಇನ್ನಿತರ ಯೋಜನೆಗಳಡಿಯಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುವುದಿಲ್ಲ.

j. ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಮತ್ತು ಪ್ರತಿಭಾ ಪುರಸ್ಕಾರ (ಶುಲ್ಕ ಉಚಿತ) ಯೋಜನೆಯ ಅರ್ಹ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಸರ್ಕಾರ ನಿಗಧಿಪಡಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಪಾವತಿಸಿದ ಬೋಧನಾ ಶುಲ್ಕವನ್ನು ಮಂಜೂರು ಮಾಡುವುದು ಹಾಗೂ ಕಾಲಕಾಲಕ್ಕೆ ನಿಗಧಿಪಡಿಸುವ ಬೋಧನಾ ಶುಲ್ಕವನ್ನು ಮಂಜೂರು ಮಾಡುವುದು.

| ಕ್ರ. ಸಂ. | ಕೋರ್ಸಿನ ಹೆಸರು | ಬೋಧನಾ ಶುಲ್ಕ, ವಿ.ವಿ ನೋಂದಣಿ ಶುಲ್ಕ ಸೇರಿದಂತೆ ಒಟ್ಟು (ರೂ.)ಗಳಲ್ಲಿ |
|---|---|---|
| 1. | ಇಂಜಿನಿಯರಿಂಗ್ / ಆರ್ಕಿಟೆಕ್ಚರ್ | ರೂ.20,500/- (ಸರ್ಕಾರಿ/ ಅನುದಾನಿತ ಸಂಸ್ಥೆಯಲ್ಲಿನ ಅನುದಾನಿತ ಕೋರ್ಸುಗಳಿಗೆ ಮಾತ್ರ)<br>ರೂ.64,686/- (Type-1 ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಿಗೆ)<br>ಅಥವಾ<br>ರೂ.71,874/- (Type-2 ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಿಗೆ) |

2. <u>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಶುಲ್ಕ ಮಂಜೂರಾತಿ/ಮರುಪಾವತಿ:-</u> ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಿಗಿಂತ ಹೆಚ್ಚು ಮತ್ತು ರೂ.10.00 ಲಕ್ಷಗಳ ಮಿತಿಯೊಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಕೆ.ಇ.ಎ, ಮೂಲಕ ಸರ್ಕಾರಿ/ಅನುದಾನಿತ/ಅನುದಾನ ರಹಿತ/ಖಾಸಗಿ ಮತ್ತು Deemed Universities ಗಳಲ್ಲಿ ಬಿ.ಇ/ಬಿ.ಟೆಕ್/ ಬಿ.ಆರ್ಕ್ ಕೋರ್ಸ್‌ಗಳಿಗೆ ಆಯ್ಕೆಯಾಗಿ ದಾಖಲಾಗುವ ವಿದ್ಯಾರ್ಥಿಗಳಿಗೆ ಶೇ.100 ರಷ್ಟು, ಕೆ.ಇ.ಎ, ಮೂಲಕ ಪಿ.ಜಿ. ಸಿ.ಇ.ಟಿಯ ಎಂ.ಇ/ಎಂ.ಟೆಕ್/ಎಂ.ಆರ್ಕ್ ಮತ್ತು "ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾಮೆಡ್-ಕೆ/ಕೆ.ಆರ್.ಎಲ್.ಎಂ.ಪಿ.ಸಿ.ಎ ಮೂಲಕ ಬಿ.ಇ/ಬಿ.ಟೆಕ್/ಬಿ.ಆರ್ಕ್ ಕೋರ್ಸ್‌ಗಳಿಗೆ ಆಯ್ಕೆಯಾಗಿ ದಾಖಲಾಗುವ ವಿದ್ಯಾರ್ಥಿಗಳಿಗೆ ಶೇ:50 ರಷ್ಟು ಶುಲ್ಕವನ್ನು ಹಾಗೂ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆದಂತಹ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಶೇ. 100%ರಷ್ಟು ಸರ್ಕಾರ ನಿಗಧಿಪಡಿಸಿದ ಶುಲ್ಕವನ್ನು ತಾಂತ್ರಿಕ ಶಿಕ್ಷಣ ಇಲಾಖೆಯು ಶುಲ್ಕ ಮಂಜೂರಾತಿ/ಮರುಪಾವತಿಸಲು ಆದೇಶಿಸಿದೆ.

<u>ಷರತ್ತುಗಳು ಮತ್ತು ನಿಬಂಧನೆಗಳು</u> :-

a. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಿಗಿಂತ ಹೆಚ್ಚು ಮತ್ತು ರೂ.10.00 ಲಕ್ಷಗಳ ಒಳಗಿರತಕ್ಕದ್ದು.

b. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆ.ಇ.ಎ) ಮುಖಾಂತರ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ 100% ರಷ್ಟು ಶುಲ್ಕ ಮರುಪಾವತಿ ಮಾಡುವುದು.

c. ಪಿ.ಜಿ. ಸಿ.ಇ.ಟಿ/ ಕಾಮೆಡ್- ಕೆ/ಕೆ.ಆರ್.ಎಲ್.ಎಂ.ಪಿ.ಸಿ.ಎ ಮುಖಾಂತರ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ. 50% ರಷ್ಟು ಶುಲ್ಕ ಮರುಪಾವತಿ ಮಾಡುವುದು.

d. ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆದಂತಹ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ. 100% ರಷ್ಟು ಶುಲ್ಕ ಮರುಪಾವತಿ ಮಾಡುವುದು.

e. ಈ ಯೋಜನೆಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಆದಾಯ ಪ್ರಮಾಣ ಪತ್ರದ ಜೊತೆಗೆ, ಪೋಷಕರ ವೇತನ ಪ್ರಮಾಣ /ಆದಾಯ ತೆರಿಗೆ ಪಾವತಿ ರಿಟರ್ನ್ಸ್‌ನ್ನು ಸಲ್ಲಿಸುವುದು.

f. ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ(ಎಸ್.ಎಸ್.ಪಿ) ಮುಖಾಂತರ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು.

g. ಆರ್ಥಿಕ ವರ್ಷಕ್ಕೆ ಹಂಚಿಕೆ/ ಬಿಡುಗಡೆಯಾಗುವ ಅನುದಾನದ ಮಿತಿಯಲ್ಲಿ ಕ್ರಮವಾಗಿ ಸರ್ಕಾರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಂತರ ಅನುದಾನಿತ ಸಂಸ್ಥೆಯ ವಿದ್ಯಾರ್ಥಿಗಳಿಗೆ ಹಾಗೂ ಅನುದಾನ ರಹಿತ ಖಾಸಗಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆ ಮೇರೆಗೆ ವಿದ್ಯಾರ್ಥಿವೇತನ ವಿತರಣೆ ಮಾಡುವುದು.

h. ಈ ಸೌಲಭ್ಯವು ಕರ್ನಾಟಕ ರಾಜ್ಯದಲ್ಲಿರುವ ಸಂಸ್ಥೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ಉಚಿತ ನೀಡುವುದು.

i. ಡೋನೇಷನ್/ ಆಡಳಿತ ಮಂಡಳಿ ಕೋಟಾದಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ.

j. ಈ ಯೋಜನೆಯ ಫಲಾನುಭವಿಗಳು ರಾಜ್ಯ ಮತ್ತು ಕೇಂದ್ರದ ಬೇರೆ ಯಾವುದೇ ಇನ್ನಿತರ ಯೋಜನೆಗಳಡಿಯಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುವುದಿಲ್ಲ.

k. ಶುಲ್ಕ ಮಂಜೂರಾತಿ/ಮರುಪಾವತಿ ಯೋಜನೆಯ ಅರ್ಹ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಸರ್ಕಾರ ನಿಗಧಿಪಡಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕಾಮೆಡ್-ಕೆ ರಲ್ಲಿ ಪಾವತಿಸಿದ ಶುಲ್ಕವನ್ನು ಮಂಜೂರು ಮಾಡುವುದು ಹಾಗೂ ಸರ್ಕಾರ ಕಾಲಕಾಲಕ್ಕೆ ನಿಗಧಿಪಡಿಸುವ ಶುಲ್ಕವನ್ನು ಮಂಜೂರು ಮಾಡುವುದು.

**ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೆ.ಇ.ಎ (ಸಿ.ಇ.ಟಿ) ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಶುಲ್ಕ ಪಾವತಿಸುವುದು.**

| ಕೋಟಾ | ಬೋಧನಾ ಶುಲ್ಕ | ವಿ.ವಿ ಪ್ರವೇಶ ಶುಲ್ಕ | ವಿ.ವಿ ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಇತರೆ ಕಡ್ಡಾಯ ಶುಲ್ಕಗಳು ಗರಿಷ್ಟ ರೂ.500/- |
|---|---|---|---|---|---|
| ಸರ್ಕಾರಿ/ಅನುದಾನಿತ ಸಂಸ್ಥೆಗಳಿಗೆ | 16,500 | 100 | 4,000 | 2,400 | 500 |
| ಅನುದಾನ ರಹಿತ ಖಾಸಗಿ | 60,686 | 100 | 4,000 | 2,400 | 500 |

| ಕೋಟಾ | ಬೋಧನಾ ಶುಲ್ಕ | ವಿ.ವಿ ಪ್ರವೇಶ ಶುಲ್ಕ | ವಿ.ವಿ ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಇತರೆ ಕಡ್ಡಾಯ ಶುಲ್ಕಗಳು ಗರಿಷ್ಟ ರೂ.500/- |
|---|---|---|---|---|---|
| ಸಂಸ್ಥೆಗಳಿಗೆ (Type -1) | | | | | |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ (Type -2) | 67,874 | 100 | 4,000 | 2,400 | 500 |
| ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು | 64,686 | 100 | 4,000 | 2,400 | 500 |

ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾಮೆಡ್-ಕೆ / ಕೆ.ಆರ್.ಎಲ್.ಎಮ್.ಪಿ.ಸಿ.ಎ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.50 ರಷ್ಟು ಪಾವತಿಸುವುದು.

| ಕೋಟಾ | ನಿಗಧಿ ಪಡಿಸಿರುವ ಶುಲ್ಕ | ಮರುಪಾವತಿಸುವ ಬೋಧನಾ ಶುಲ್ಕ | ವಿ.ವಿ ಪ್ರವೇಶ ಶುಲ್ಕ | ವಿ.ವಿ ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಇತರೆ ಕಡ್ಡಾಯ ಶುಲ್ಕಗಳು ಗರಿಷ್ಟ ರೂ.500/- |
|---|---|---|---|---|---|---|
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ (Type-1) | 1,54,123 | 77,062 | 50 | 2,000 | 1,200 | 250 |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ (Type -2) | 2,18,156 | 1,09,078 | 50 | 2,000 | 1,200 | 250 |

ಪಾಲಿಟೆಕ್ನಿಕ್‌ಗಳಲ್ಲಿ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಶುಲ್ಕ ಮರುಪಾವತಿ.

| ಕೋಟಾ | ಬೋಧನಾ ಶುಲ್ಕ | ನೋಂದಣಿ ಶುಲ್ಕ / ಪ್ರವೇಶ ಶುಲ್ಕ | ಪರೀಕ್ಷಾ ಶುಲ್ಕ | ಇತರೆ ಕಡ್ಡಾಯ ಶುಲ್ಕಗಳು ಗರಿಷ್ಟ ರೂ.500/- |
|---|---|---|---|---|
| ಸರ್ಕಾರಿ ಸಂಸ್ಥೆಗಳಿಗೆ | 2,940 | 30 | 700 | 500/- |
| ಅನುದಾನಿತ ಸಂಸ್ಥೆಗಳಿಗೆ | 5,618 | 30 | 700 | 500/- |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ | 12,075 | 30 | 700 | 500/- |

ಪಿ.ಜಿ ಸಿ.ಇ.ಟಿ ಮೂಲಕ ಎಂ.ಇ., ಎಂ.ಟೆಕ್, ಎಂ.ಆರ್ಕ್ ಕೋರ್ಸಿನ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.50 ರಷ್ಟು ಪಾವತಿಸುವುದು.

| ಕೋಟಾ | ನಿಗಧಿ ಪಡಿಸಿರುವ ಶುಲ್ಕ | ಮರು ಪಾವತಿಸುವ ಬೋಧನಾ ಶುಲ್ಕ | ವಿ.ವಿ ಪ್ರವೇಶ ಶುಲ್ಕ | ವಿ.ವಿ ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಇತರೆ ಕಡ್ಡಾಯ ಶುಲ್ಕಗಳು ಗರಿಷ್ಟ ರೂ.500/- |
|---|---|---|---|---|---|---|
| ಸರ್ಕಾರಿ / ಅನುದಾನಿತ ಸಂಸ್ಥೆಗಳಿಗೆ | 20,000 | 10,000 | 50 | 2,000 | 1,200 | 250 |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ | 66,000 | 33,000 | 50 | 2,000 | 1,200 | 250 |

3. <u>ರಕ್ಷಣಾದಳದ ಸಿಬ್ಬಂದಿಯ ಮಕ್ಕಳಿಗೆ/ಆಶ್ರಿತರಿಗೆ ವಿದ್ಯಾರ್ಥಿವೇತನ:-</u> ರಕ್ಷಣಾದಳದಲ್ಲಿ (ಭೂ,ವಾಯು ಮತ್ತು ನೌಕದಳ)ಹಾಲಿ ಸೇವೆ ಸಲ್ಲಿಸುತ್ತಿರುವ ಯೋಧರು/ ಸಿಬ್ಬಂದಿಯವರ (Non Commissioned Ranks or Junior Warrant Officer & Below Ranks Holder) ಮಕ್ಕಳಿಗೆ/ ಆಶ್ರಿತರು, ತಾಂತ್ರಿಕ ಸಂಸ್ಥೆಗಳಲ್ಲಿ ಕೆ.ಇ.ಎ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ 100% ರಷ್ಟು ವಿದ್ಯಾರ್ಥಿವೇತನ ನೀಡುವುದು.

<u>ಷರತ್ತುಗಳು ಮತ್ತು ನಿಬಂಧನೆಗಳು</u>:-

A. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಸಿ.ಇ.ಟಿ) ಮುಖಾಂತರ ಬಿ.ಇ/ಬಿ.ಟೆಕ್/ಬಿ.ಆರ್ಕ್ ಕೋರ್ಸುಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ, ಪ್ರಸ್ತುತ ಈ ವಿದ್ಯಾರ್ಥಿ ವೇತನವನ್ನು 2022-23ನೇ ಶೈಕ್ಷಣಿಕ ಸಾಲಿನಿಂದ ಎಸ್.ಎಸ್.ಪಿ ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇಕಡಾ 100% ರಷ್ಟು ವಿದ್ಯಾರ್ಥಿ ವೇತನ ನೀಡುವುದು.

B. ಸರ್ಕಾರಿ ಮತ್ತು ಅನುದಾನಿತ/ಅನುದಾನ ರಹಿತ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆದಂತಹ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ಶುಲ್ಕ ಶೇ.100% ರಷ್ಟು ವಿದ್ಯಾರ್ಥಿವೇತನ ನೀಡಲಾವುದು.

C. ಆರ್ಥಿಕ ವರ್ಷಕ್ಕೆ ಹಂಚಿಕೆ/ ಬಿಡುಗಡೆಯಾಗುವ ಅನುದಾನದ ಮಿತಿಯಲ್ಲಿ ಕ್ರಮವಾಗಿ ಸರ್ಕಾರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಂತರ ಅನುದಾನಿತ ಸಂಸ್ಥೆಯ ವಿದ್ಯಾರ್ಥಿಗಳಿಗೆ ಹಾಗೂ ಅನುದಾನ ರಹಿತ ಖಾಸಗಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆ ಮೇರೆಗೆ ವಿದ್ಯಾರ್ಥಿವೇತನ ವಿತರಣೆ ಮಾಡುವುದು.

D. ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ (ಎಸ್.ಎಸ್.ಪಿ) ಮುಖಾಂತರ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಪರಿಗಣಿಸತಕ್ಕದ್ದು.

E. ಈ ಯೋಜನೆಯ ಫಲಾನುಭವಿಗಳು ರಾಜ್ಯ ಮತ್ತು ಕೇಂದ್ರದ ಬೇರೆ ಯಾವುದೇ ಇನ್ನಿತರ ಯೋಜನೆಗಳಡಿಯಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುವುದಿಲ್ಲ.

F. ಈ ಯೋಜನೆಯ ಅರ್ಹ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಸರ್ಕಾರ ನಿಗಧಿಪಡಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಪಾವತಿಸಿದ ಶುಲ್ಕವನ್ನು ಮಂಜೂರು ಮಾಡುವುದು ಹಾಗೂ ಕಾಲಕಾಲಕ್ಕೆ ನಿಗಧಿಪಡಿಸುವ ಶುಲ್ಕವನ್ನು ಮಂಜೂರು ಮಾಡುವುದು.

ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೆ.ಇ.ಎ (ಸಿ.ಇ.ಟಿ) ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಶುಲ್ಕ ಪಾವತಿಸುವುದು.

| ಕಾಲೇಜು/ವರ್ಗ | ಬೋಧನಾ ಶುಲ್ಕ | ಪರೀಕ್ಷಾ ಶುಲ್ಕ | ವಾಚನಾಲಯ ಮತ್ತು ಸಂಘದ ಶುಲ್ಕ | ವೈದ್ಯಕೀಯ ಶುಲ್ಕ | ಪ್ರವೇಶ ಶುಲ್ಕ | ಕ್ರೀಡಾ ಶುಲ್ಕ | ವಸ್ತ್ರ ಭತ್ಯೆ | ಪುಸ್ತಕ ಸಹಾಯಧನ | ಊಟ ಮತ್ತು ವಸತಿ ಭತ್ಯೆ |
|---|---|---|---|---|---|---|---|---|---|
| ಸರ್ಕಾರಿ/ ಅನುದಾನಿತ ಸಂಸ್ಥೆಗಳಿಗೆ | 16,500 | 2,400 | 75 | 20 | 100 | 200 | 50 | 100 | 150 |
| ಅನುದಾನರಹಿತ ಖಾಸಗಿ ಸಂಸ್ಥೆಗಳಿಗೆ (Type -1) | 60,686 | 2,400 | 75 | 20 | 100 | 200 | 50 | 100 | 150 |
| ಅನುದಾನರಹಿತ ಖಾಸಗಿ ಸಂಸ್ಥೆಗಳಿಗೆ (Type -2) | 67,874 | 2,400 | 75 | 20 | 100 | 200 | 50 | 100 | 150 |
| ಖಾಸಗಿ / ಡೀಮ್ಡ್ ವಿಶ್ವವಿದ್ಯಾಲಯಗಳು | 64,686 | 2,400 | 75 | 20 | 100 | 200 | 50 | 100 | 150 |

ಪಾಲಿಟೆಕ್ನಿಕ್‌ಗಳಲ್ಲಿ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಶುಲ್ಕ ಮರುಪಾವತಿ.

| ಕಾಲೇಜು/ವರ್ಗ | ಬೋಧನಾ ಶುಲ್ಕ | ಪರೀಕ್ಷಾ ಶುಲ್ಕ | ವಾಚನಾಲಯ ಮತ್ತು ಸಂಘದ ಶುಲ್ಕ | ಪ್ರವೇಶ ಶುಲ್ಕ | ಕ್ರೀಡಾ ಶುಲ್ಕ | ವಸ್ತ್ರ ಭತ್ಯೆ | ಪುಸ್ತಕ ಸಹಾಯಧನ |
|---|---|---|---|---|---|---|---|
| ಸರ್ಕಾರಿ ಸಂಸ್ಥೆಗಳಿಗೆ | 2,940 | 700 | 160 | 30 | 70 | 50 | 60 |
| ಅನುದಾನಿತ ಸಂಸ್ಥೆಗಳಿಗೆ | 5,618 | 700 | 160 | 30 | 70 | 50 | 60 |
| ಅನುದಾನರಹಿತ ಖಾಸಗಿ ಸಂಸ್ಥೆಗಳಿಗೆ | 12,075 | 700 | 160 | 30 | 70 | 50 | 60 |

4. **ಹೆಚ್.ಐ.ವಿ/ಕುಷ್ಠರೋಗ ಪೀಡಿತ ಪೋಷಕರ ಮಕ್ಕಳಿಗೆ/ಪೀಡಿತರಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನ ಮತ್ತು ಉಚಿತ ಶಿಕ್ಷಣ:-** 2022-23ನೇ ಸಾಲಿನಿಂದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಕೋರ್ಸ್, ವೃತ್ತಿ ಶಿಕ್ಷಣ ಕೋರ್ಸ್ ಹಾಗೂ ವೃತ್ತಿಪರ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಹೆಚ್‌ಐವಿ/ ಕುಷ್ಠರೋಗಗಳಿಂದ ಪೀಡಿತರಾದ ಪಾಲಕರ ಅರ್ಹ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಹಾಗೂ ಉಚಿತ ಶಿಕ್ಷಣವನ್ನು ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

**ಷರತ್ತುಗಳು ಮತ್ತು ನಿಬಂಧನೆಗಳು:-**

a. ಈ ಕಾರ್ಯಕ್ರಮದ ಲಾಭ ಪಡೆಯಲು ವಿವರಿಸಿದಂತೆ ಷರತ್ತುಗಳನ್ನು ಪಾಲಿಸಬೇಕಾಗುತ್ತದೆ. ಹೆಚ್.ಐ.ವಿ/ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾಗಿದ್ದು ಬದುಕಿರುವ/ಮೃತರಾಗಿರುವ ತಂದೆ ತಾಯಿಯರಿಗೆ ಜನಿಸಿದ ಮಕ್ಕಳಾಗಿರಬೇಕು.
b. ಪ್ರಸ್ತುತ ರೋಗಗ್ರಸ್ತ ಅಥವಾ ರೋಗಮುಕ್ತವಾಗಿರುವ ಪರಿಸ್ಥಿತಿಯನ್ನು ಪರಿಗಣಿಸದೇ ಹೆಚ್.ಐ.ವಿ/ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಶಿಷ್ಯವೇತನ ಮತ್ತು ಉಚಿತ ಶಿಕ್ಷಣ ನೀಡುವುದು.
c. ಸರ್ಕಾರಿ/ಅನುದಾನಿತ/ಸರ್ಕಾರಿ ಕೋಟಾ ಅಡಿಯಲ್ಲಿರುವ ಸ್ವಾಯತ್ತತೆ ಹೊಂದಿರುವ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳು ಮಾತ್ರ ಅರ್ಹರು.
d. ವಿದ್ಯಾರ್ಥಿಯು ಅಥವಾ ಅವರ ತಂದೆ ತಾಯಿಗಳು ಕುಷ್ಠ ರೋಗಕ್ಕೆ ಎಂ.ಡಿ.ಟಿ ಚಿಕಿತ್ಸೆ ಪಡೆದವರಾಗಿರಬೇಕು ಅಥವಾ ಹೆಚ್.ಐ.ವಿ./ಏಡ್ಸ್ ರೋಗಕ್ಕೆ ಎ.ಆರ್.ಟಿ. ಚಿಕಿತ್ಸೆ ಪಡೆದವರಾಗಿರಬೇಕು.
e. ವಿದ್ಯಾರ್ಥಿಯು ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಸಂಸ್ಥೆಯ ಪತ್ರದೊಂದಿಗೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಲ್ಲಿಸಿದ ನಂತರ ಅರ್ಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮತ್ತು ಜೀವನೋಪಾಯದ ಭತ್ಯೆ ನೀಡುವುದು.
f. ಈ ಯೋಜನೆಯ ಫಲಾನುಭವಿಗಳು ರಾಜ್ಯ ಮತ್ತು ಕೇಂದ್ರದ ಬೇರೆ ಯಾವುದೇ ಯೋಜನೆಗಳಡಿಯಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಿರುವುದಿಲ್ಲ.
g. ಈ ಯೋಜನೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯು ಈ ಯೋಜನೆಯಡಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ( ಎಸ್.ಎಸ್.ಪಿ) ಅಳವಡಿಸಿದ ನಂತರವೇ ಅನುಮೋದನೆ ನೀಡತಕ್ಕದ್ದು.

**ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಕೆ.ಇ.ಎ (ಸಿ.ಇ.ಟಿ) ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಶುಲ್ಕ ಪಾವತಿಸುವುದು.**

| ಕಾಲೇಜು/ವರ್ಗ | ಜೀವನೋಪಾಯದ ಭತ್ಯೆ (ರೂ.1500/- ರಂತೆ 12 ತಿಂಗಳು) | ಮನೆ ಪಾಠ ಶುಲ್ಕ (ಶುಲ್ಕ ಪಾವತಿ ರಶೀದಿಯಂತೆ) | ಪ್ರತಿ ವರ್ಷ ಶೈಕ್ಷಣಿಕ ವರ್ಷದ ಶುಲ್ಕ ಪಾವತಿ/ಬಟ್ಟೆ/ ವಸ್ತ್ರ/ಪುಸ್ತಕ/ಕಲಿಕೆಗೆ ಸಂಬಂಧಿಸಿದ ಉಪಕರಣಗಳು ರೂ.3000 ರಂತೆ |
|---|---|---|---|
| ಸರ್ಕಾರಿ/ಅನುದಾನಿತ ಸಂಸ್ಥೆಗಳಿಗೆ | 18,000 | 16,500 | 3000 |

| ಕಾಲೇಜು/ವರ್ಗ | ಜೀವನೋಪಾಯದ ಭತ್ಯೆ (ರೂ.1500/- ರಂತೆ 12 ತಿಂಗಳು) | ಮನೆ ಪಾಠ ಶುಲ್ಕ (ಶುಲ್ಕ ಪಾವತಿ ರಶೀದಿಯಂತೆ) | ಪ್ರತಿ ವರ್ಷ ಶೈಕ್ಷಣಿಕ ವರ್ಷದ ಶುಲ್ಕ ಪಾವತಿ/ಬಟ್ಟೆ/ ವಸ್ತ್ರ/ಪುಸ್ತಕ/ಕಲಿಕೆಗೆ ಸಂಬಂಧಿಸಿದ ಉಪಕರಣಗಳು ರೂ.3000 ರಂತೆ |
|---|---|---|---|
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ (Type-1) | 18,000 | 60,686 | 3000 |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ (Type-2) | 18,000 | 67,874 | 3000 |
| ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು | 18,000 | 64,686 | 3000 |

ಪಿ.ಜಿ ಸಿ.ಇ.ಟಿ ಮೂಲಕ ಎಂ.ಇ., ಎಂ.ಟೆಕ್, ಎಂ.ಆರ್ಕ್ ಕೋರ್ಸಿನ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಪಾವತಿಸುವುದು.

| ಕಾಲೇಜು/ವರ್ಗ | ಜೀವನೋಪಾಯದ ಭತ್ಯೆ (ರೂ.1500/-ರಂತೆ 12 ತಿಂಗಳು) | ಮನೆಪಾಠ ಶುಲ್ಕ (ಶುಲ್ಕ ಪಾವತಿ ರಶೀದಿಯಂತೆ) | ಪ್ರತಿ ವರ್ಷ ಶೈಕ್ಷಣಿಕ ವರ್ಷದ ಶುಲ್ಕ ಪಾವತಿ/ಬಟ್ಟೆ/ ವಸ್ತ್ರ/ಪುಸ್ತಕ/ಕಲಿಕೆಗೆ ಸಂಬಂಧಿಸಿದ ಉಪಕರಣಗಳು ರೂ.3000 ರಂತೆ |
|---|---|---|---|
| ಸರ್ಕಾರಿ/ ಅನುದಾನಿತ ಸಂಸ್ಥೆಗಳಿಗೆ | 18,000 | 20,000 | 3000 |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ | 18,000 | 66,000 | 3000 |

<u>ಪಾಲಿಟೆಕ್ನಿಕ್‌ಗಳಲ್ಲಿ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶೇ.100 ರಷ್ಟು ಶುಲ್ಕ ಮರುಪಾವತಿ.</u>

| ಕಾಲೇಜು/ವರ್ಗ | ಜೀವನೋಪಾಯದ ಭತ್ಯೆ (ರೂ.1500/-ರಂತೆ 12 ತಿಂಗಳು) | ಮನೆಪಾಠ ಶುಲ್ಕ (ಶುಲ್ಕ ಪಾವತಿ ರಶೀದಿಯಂತೆ) | ಪ್ರತಿ ವರ್ಷ ಶೈಕ್ಷಣಿಕ ವರ್ಷದ ಶುಲ್ಕ ಪಾವತಿ/ಬಟ್ಟೆ/ ವಸ್ತ್ರ/ಪುಸ್ತಕ/ಕಲಿಕೆಗೆ ಸಂಬಂಧಿಸಿದ ಉಪಕರಣಗಳು ರೂ.3000 ರಂತೆ |
|---|---|---|---|
| ಸರ್ಕಾರಿ ಸಂಸ್ಥೆಗಳಿಗೆ | 18,000 | 2,940 | 3000 |

| ಕಾಲೇಜು/ವರ್ಗ | ಜೀವನೋಪಾಯದ ಭತ್ಯೆ (ರೂ.1500/-ರಂತೆ 12 ತಿಂಗಳು) | ಮನೆಪಾಠ ಶುಲ್ಕ (ಶುಲ್ಕ ಪಾವತಿ ರಶೀದಿಯಂತೆ) | ಪ್ರತಿ ವರ್ಷ ಶೈಕ್ಷಣಿಕ ವರ್ಷದ ಶುಲ್ಕ ಪಾವತಿ/ಬಟ್ಟೆ/ ವಸ್ತ್ರ/ಪುಸ್ತಕ/ಕಲಿಕೆಗೆ ಸಂಬಂಧಿಸಿದ ಉಪಕರಣಗಳು ರೂ.3೦೦೦ ರಂತೆ |
|---|---|---|---|
| ಅನುದಾನಿತ ಸಂಸ್ಥೆಗಳಿಗೆ | 18,000 | 5,618 | 3000 |
| ಅನುದಾನ ರಹಿತ ಖಾಸಗಿ ಸಂಸ್ಥೆಗಳಿಗೆ | 18,000 | 12,075 | 3000 |

5. <u>ಕಿರಿಯ ತಾಂತ್ರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ:-</u> 2022-23ನೇ ಶೈಕ್ಷಣಿಕ ಸಾಲಿನಿಂದ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ತಾಂತ್ರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8, 9 ಹಾಗೂ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ಪ್ರಸ್ತುತ ನೀಡಲಾಗುತ್ತಿರುವ ಶಿಷ್ಯ ವೇತನವನ್ನು ಮಾಸಿಕ ರೂ.50/-ರ ಬದಲಾಗಿ ರೂ.250/-ಗಳಿಗೆ ಪರಿಷ್ಕರಿಸಿದೆ.

<u>ಷರತ್ತುಗಳು ಮತ್ತು ನಿಬಂಧನೆಗಳು:-</u>

a. ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ 8ನೇ, 9ನೇ ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ನೀಡುವುದು.
b. ವಿದ್ಯಾರ್ಥಿಗಳ ಮಾಹಿತಿಯಿರುವ ಪಟ್ಟಿಯನ್ನು ಸಂಸ್ಥೆಯವರು ಅಗತ್ಯ ದಾಖಲಾತಿಗಳೊಂದಿಗೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸಿದ ನಂತರ ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುವುದು.
c. ಅರ್ಹ ವಿದ್ಯಾರ್ಥಿಗಳು ಮೆಟ್ರಿಕ್ ಪೂರ್ವ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ(ಎಸ್.ಎಸ್.ಪಿ) ಮುಖಾಂತರ ಕಡ್ಡಾಯವಾಗಿ ಅರ್ಜಿ ಸಲ್ಲಿಸಿದ ನಂತರ ಪರಿಶೀಲಿಸಿ ಅನುಮೋದನೆ ನೀಡುವುದು.

| ತರಗತಿಗಳು | ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.250/-ರಂತೆ ಶಿಷ್ಯ ವೇತನ (10 ತಿಂಗಳಿಗೆ) |
|---|---|
| 08, 09 ಮತ್ತು 10ನೇ ತರಗತಿಗಳಿಗೆ | ರೂ.2,500/- |

6. <u>ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ:-</u> ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಇಂಜಿನಿಯರಿಂಗ್ ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಮಂಜೂರಾತಿ ನೀಡಲು ಕಾಲೇಜು ಶಿಕ್ಷಣ ಇಲಾಖೆ ಅನುಮತಿ ನೀಡಿದೆ. 2023-24ನೇ ಸಾಲಿನಿಂದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿತರಿಸುವ ಈ ಪುರಸ್ಕಾರ ಯೋಜನೆಯನ್ನು ಉನ್ನತ ಶಿಕ್ಷಣ ಇಲಾಖೆ, ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಿದೆ. ಅದರಂತೆ ಅನುಷ್ಠಾನಗೊಳಿಸುವುದು.

<u>ಷರತ್ತುಗಳು ಮತ್ತು ನಿಬಂಧನೆಗಳು:-</u>

a. 2022-23ನೇ ಸಾಲಿನಲ್ಲಿ(ನೂತನ & ನವೀಕರಣ) ಈ ಯೋಜನೆಯಡಿ ಬರುವ ಇಂಜನಿಯರಿಂಗ್ ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಕಿತ್ತೂರು ರಾಣಿ

ಚೆನ್ನಮ್ಮ ಪುರಸ್ಕಾರ ಮಂಜೂರಾತಿಯನ್ನು ಕಾಲೇಜು ಶಿಕ್ಷಣ ಇಲಾಖೆಯಿಂದ ಮಂಜೂರಾತಿ ನೀಡುವುದು.

b. 2023-24ನೇ ಸಾಲಿನಿಂದ ಈ ಯೋಜನೆಯ ಅನುಷ್ಠಾನ/ಮಂಜೂರಾತಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ.
c. ಈ ಯೋಜನೆಯಡಿ ಶುಲ್ಕ ಮರುಪಾವತಿಗಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿನಿಯರು ಇತರೆ ಇಲಾಖೆಗಳು ನೀಡುವ ವಿದ್ಯಾರ್ಥಿವೇತನ/ಶುಲ್ಕ ಮರುಪಾವತಿ ಮಂಜೂರಾತಿಗೆ ಅರ್ಹರಿರುವುದಿಲ್ಲ.
d. 2022-23ನೇ ಸಾಲಿನಿಂದ ಪ್ರಥಮ ವರ್ಷದ ವಿದ್ಯಾರ್ಥಿನಿಯರ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪಡೆದು ಈ ಯೋಜನೆಯನ್ನು ಎಸ್.ಎಸ್.ಪಿ. ಪೋರ್ಟಲ್ ಮೂಲಕ ಅನುಷ್ಠಾನಗೊಳಿಸುವುದು.
e. 2022-23ನೇ ಸಾಲಿನ ನವೀಕರಣಕ್ಕೆ ಸಂಬಂದಿಸಿದ ಮಾಹಿತಿಯನ್ನು ಎಸ್. ಎಸ್. ಪಿ. ಪೋರ್ಟಲ್ ನವರು ಸೂಚಿಸುವ ಮಾಹಿತಿಯ ಆಧಾರದ ಮೇಲೆ ಸಂಬಂಧಿಸಿದ ಕಾಲೇಜುಗಳಿಂದ ವಿದ್ಯಾರ್ಥಿಗಳ ಮಾಹಿತಿ ಪಡೆದು ಎಸ್.ಎಸ್.ಪಿ. ಪೋರ್ಟಲ್‌ಗೆ ನೀಡುವುದು.
f. ನವೀಕರಣ ಮಂಜೂರಾತಿ ಪಡೆಯಲು ವಿದ್ಯಾರ್ಥಿಗಳು ಹಿಂದಿನ ವರ್ಷದ ಸೆಮಿಸ್ಟರುಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾಗಿರತಕ್ಕದ್ದು.
g. ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

28.02.2023

(ನರಸಿಂಹಪ್ಪ)
ಸರ್ಕಾರದ ಜಂಟಿ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ

28/2

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರಿ, ಬೆಂಗಳೂರು.
8. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
10. ಆಯುಕ್ತರು, ಖಜಾನೆ ಆಯುಕ್ತಾಲಯ, ಅರಮನೆ ರಸ್ತೆ, ಬೆಂಗಳೂರು.
11. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

12. ಅಪರ ನಿರ್ದೇಶಕರು, ಟಿಎನ್ಎಂಸಿ, ಖನಿಜಭವನ, ಬೆಂಗಳೂರು.
13. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ ಇಲಾಖೆ ಮುಖಾಂತರ)
14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ರವರ ಆಪ್ತ ಕಾರ್ಯದರ್ಶಿಗಳು.
15. ಎಲ್ಲಾ ಪಾಲಿಟೆಕ್ನಿಕ್ /ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಮುಖಾಂತರ)
16. ನೋಡಲ್ ಅಧಿಕಾರಿ, ಮಾಹಿತಿ ಕೇಂದ್ರ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು (ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು)
17. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಪ್ರತಿ.